# 34

# ನೀವು ಅಸಹಾಯಕರಾಗಿರುವಾಗ, ಏನು ಮಾಡಬೇಕು

## (12:1-18, 24)

ಅನೇಕ ವರ್ಷಗಳಿಂದ, ಕ್ರೈಸ್ತರು ತಮ್ಮ ಸೋಲುವ ಸಮಯಗಳಲ್ಲಿ ಕೆಲವು ವಿಷಯಗಳನ್ನು ಹೇಳುವದನ್ನು ನಾನು ಕೇಳಿರುವೆನು ಅದೇನೆಂದರೆ, "ನನಗೆ ಗೊತ್ತಿರುವದನ್ನೆಲ್ಲಾ ಮಾಡಿಯಾಯಿತು, ಮುಂದೇನು ಮಾಡಬೇಕೆಂದು ನನಗೆ ಗೋಚರಿಸುತ್ತಿಲ್ಲಾ!" ನನಗೆ ಇತ್ತೀಚೆಗಷ್ಟೆ ಓದಿದ ಒಂದು ಚಿಕ್ಕ ಕಥೆಯು ನೆನಪಾಗುತ್ತದೆ. ಒಬ್ಬ ಚಿಕ್ಕ ಬಾಲಕನು ಅವನ ತಂದೆಯೊಂದಿಗೆ ಅಂಗಳದಲ್ಲಿ ಕೆಲಸಮಾಡುತ್ತಿದ್ದನು. ಚಿಕ್ಕ ಹುಡುಗನು ಒಂದು ದೊಡ್ಡ ಕಲ್ಲನ್ನು ಉರುಳಿಸಲು ನಿರ್ಧರಿಸಿದನು. ತಂದೆಯು ಮಗನ ಕಷ್ಟವನ್ನು ನೋಡಿ, ಆ ಕಲ್ಲು ಸರಿಯುವದಿಲ್ಲವೆಂದು ತಿಳಿದನು. ಕೊನೆಯಲ್ಲಿ ತಂದೆಯು ಮಗನಿಗೆ, "ನೀನು ನಿನ್ನ ಎಲ್ಲಾ ಬಲವನ್ನು ಉಪಯೋಗಿಸುತ್ತಿರುವಿಯೋ?" ಅನ್ನಲು ಮಗನು ಸೋತವನಾಗಿ "ಹೌದಪ್ಪ" ಬಲವನ್ನೆಲ್ಲಾ ಉಪಯೋಗಿಸುತ್ತಿರುವೆನು. ಎನ್ನಲು ತಂದೆಯು ಅವನಿಗೆ "ನೀನು ನಿನ್ನ ಬಲವನ್ನೆಲ್ಲಾ ಉಪಯೋಗಿಸುತ್ತಿರುವದಿಲ್ಲ - ಯಾಕಂದರೆ ನೀನು ನನ್ನ ಸಹಾಯವನ್ನು ಕೇಳಲಿಲ್ಲ." ನಾನು ಮತ್ತು ನೀನು ನಮ್ಮ ಜೀವಿತದಲ್ಲಿರುವಂತ ಅಡಚಣೆಗಳನ್ನು ನಿವಾರಿಸಿಕೊಳ್ಳುವಾಗ, ಕೆಲವು ಸಾರಿ ನಾವು ಮಾಡಬೇಕಾಗಿರುವದನ್ನು ಮಾಡಿದ್ದೇವೆ ಎಂದು ತಿಳಿಯುತ್ತೇವೆ, ಆದರೆ ನಮ್ಮ ಪರಲೋಕ ತಂದೆಯ ಸಹಾಯವನ್ನು ಕೋರಿರುವದಿಲ್ಲ. ಪೌಲನು ಬರೆದು,

> ಕರ್ತನು ಹತ್ತಿರವಾಗಿದ್ದಾನೆ. ಯಾವ ಸಂಬಂದವಾಗಿಯೂ ಚಿಂತೆ ಮಾಡದೆ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನೂ ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಿಮ್ಮ ಹೃದಯಗಳನ್ನೂ ಯೋಚನೆಗಳನ್ನೂ ಕ್ರಿಸ್ತ ಯೇಸುವಿನಲ್ಲಿ ಕಾಯುವದು (ಫಿಲಿಪ್ಪಿಯವರಿಗೆ 4:5ಬಿ-7).

ನೀನು ನಿನಗೆ ತಿಳಿದಿರುವದನ್ನೆಲ್ಲಾ ಮಾಡಿದ ನಂತರ, ಆ ವಿಚಾರವನ್ನು *ನೀನು* ದೇವರಿಗೆ ಒಪ್ಪಿಸಿಬಿಡು.

ಈ ಅಧ್ಯಯನವು ಪ್ರಾರ್ಥನೆಯ ಬಲದ ಪ್ರಾಮುಖ್ಯತೆಯ ಕುರಿತಾಗಿರುತ್ತದೆ. ಪ್ರಾರ್ಥನೆಯ ಪ್ರಾಮುಖ್ಯತೆಯ ಕುರಿತು ಸತ್ಯವೇದದಲ್ಲಿ ಅನೇಕ ದೃಷ್ಟಾಂತಗಳನ್ನು ಹೇಳಲಾಗಿದೆ - ಸಲೋಮೋನನ ಜ್ಞಾನದ ಕುರಿತ ಪ್ರಾರ್ಥನೆ, ಎಲೀಯ ಮತ್ತು ಮೂರುವರೇ ವರ್ಷಗಳ ಕ್ಷಾಮ ಮತ್ತು ಯಹೆಜ್ಕೇಲನ ಹೆಚ್ಚಾದ ಜೀವಿತದ ವರ್ಷಗಳ ಕಥೆಗಳನ್ನು ಕೇಳಿದ್ದೇವೆ. ಪೇತ್ರನು ಸೆರೆಮನೆಯಿಂದ ಬಿಡುಗಡೆ ಹೊಂದಿದ ಕಥೆಯು ಇವೆಲ್ಲವುಗಳಿಗಿಂತ ಬಹು ಪ್ರಮುಖವಾದ ದೃಷ್ಟಾಂತವಾಗಿರುತ್ತದೆ ಅಪೊಸ್ತಲರ ಕೃತ್ಯಗಳು 12.

## ಹಿಂಸೆ ಹಾಗೂ ಸೆರೆಮನೆ (12:1-6, 10)

ಅಧ್ಯಾಯ 12ರಲ್ಲಿ "ಆ ಸಮಯದಲ್ಲಿ ಎಂದು ಪ್ರಾರಂಭವಾಗುತ್ತದೆ, ..." (ವಚನ 1ಎ). "ಆ ಸಮಯ" ಎಂಬುದು ಹಿಂದಿನ ಅಧ್ಯಾಯದ ಅಂತ್ಯವನ್ನು ಸೂಚಿಸುತ್ತದೆ, ಆಗ ಅಂತಿಯೋಕ್ಯದ ಶಿಷ್ಯರು ಯೂದಾಯದಲ್ಲಿನ ಕ್ರೈಸ್ತರಿಗೆ ಸಹಾಯವನ್ನು ಕಳುಹಿಸಲು ನಿರ್ಧರಿಸಿದ್ದರು. ಆ ಸಮಯದಲ್ಲಿ[1] "ಅರಸನಾದ ಹೆರೋದನು ಸಭೆಯವರಲ್ಲಿ[2] ಕೆಲವರನ್ನು ಹಿಂಸೆ ಪಡಿಸುವದಕ್ಕೆ ಕೈ ಹಾಕಿದ್ದನು"[3] (ವಚನ 1ಬಿ). ಸೌಲನ ಪರಿವರ್ತನೆಯ ದಿವಸದಿಂದ ಯೆರೂಸಲೇಮಿನ ಸಭೆಯವರು ಸ್ವಲ್ಪಕಾಲ ಸಮಧಾನವನ್ನು ಆನಂದಿಸಿದ್ದರು (9:31); ಈಗ ಆ ಸಮಾಧಾನವು ಚದುರಿಹೋಗಿತ್ತು.

ಅಪೊಸ್ತಲರ ಕೃತ್ಯದಲ್ಲಿ ಇದು ಸಭೆಗೆ ಉಂಟಾದ ನಾಲ್ಕನೆಯ ಹಿಂಸೆಯಾಗಿದೆ. ಮೊದಲ ಮೂರು ಹಿಂಸೆಗಳು ಯೆಹೂದ್ಯ ಅಧಿಕಾರಿಗಳಿಂದುಂಟಾಗದೇ, ರೋಮಾ ಅಧಿಕಾರಿಗಳ ಪ್ರತಿನಿಧಿಯಿಂದುಂಟಾಗಿತ್ತು - ಅರಸನಾದ ಹೆರೋದನು.[4] ಇವನು I ಅಗ್ರಿಪ್ಪ ಅರಸನಾಗಿದ್ದು, ಹೆರೋದದ ಮಹಾ ಅರಸನು ಹಾಗೂ ಯೇಸುವಿನ ಜನನದಲ್ಲಿ ಕೂಸುಗಳನ್ನು ಕೊಲ್ಲಬೇಕೆಂದು ಅಜ್ಞಾಪಿಸಿದ ಅರಸನ ಮೊಮ್ಮಗನಾಗಿದ್ದನು. ಅಧ್ಯಾಯ 12ರ, ಈ ಘಟನೆಯ ಸಮಯದಲ್ಲಿ ಈ ಹೆರೋದನು ಪಾಲಿಸ್ತೆನನ್ನು ಆಳುತ್ತಿದ್ದನು.

ರೋಮಾಯರಿಂದ ನೇಮಕಗೊಂಡ ಪಾಲಿಸ್ತೇನಿನ ಅಧಿಕಾರಿಗಳಂತೆ, ಹೆರೋದನು ಸಹ ಕೈಸರೆಯಲ್ಲಿ ಅರಮನೆಯನ್ನು ಹೊಂದಿ ಹಬ್ಬದ ದಿವಸಗಳಲ್ಲಿ ಮಾತ್ರ ಯೆರೂಸಲೇಮನ್ನು ಸಂಧಿಸುತ್ತಿದ್ದನು. ಅಪೊಸ್ತಲರ ಕೃತ್ಯಗಳು 12ರಲ್ಲಿ ಪಸ್ಕ ಹಬ್ಬದ ಆಚರಣೆಗಾಗಿ ಅವನು ಯೆರೂಸಲೇಮಿಗೆ ಬಂದಿದ್ದನು. ಆ ಸಮಯದಲ್ಲಿ ಸಭೆಯನ್ನು ಹಿಂಸಿಸುವದರ ಮೂಲಕ ತನ್ನ ಜನರ ಮೆಚ್ಚುಗೆಗೆ ಪಾತ್ರನಾದನು. ಆರಂಭದಲ್ಲಿ ಸಭೆಗಳವರು ಯೆರೂಸಲೇಮಿನ ನಾಗರೀಕರ ಪ್ರೋತ್ಸಾಹಕ್ಕೆ ಪಾತ್ರರಾಗಿದ್ದರು (2:47), ಆದರೆ ಅದು ಈಗ ಬದಲಾಗಿತ್ತು. ಸ್ತೆಫನನ ಪ್ರಸಂಗವು ಜನರನ್ನು ಸಭೆಗಳಿಗೆ ವಿರೋಧಿಗಳನ್ನಾಗಿ ಮಾಡಿತ್ತು (6:12), ಮತ್ತು ಇತ್ತೀಚೆಗೆ ಅಷ್ಟೆ ಉಂಟಾಗಿದ್ದ ಅನ್ಯರ ಅಂಗೀಕಾರದ ವಿಷಯವು ಅವರಲ್ಲಿ ದ್ವೇಷವನ್ನುಂಟು ಮಾಡಿರಬಹುದು. ಈಗ ಸಾರ್ವಜನಿಕ ಸಂಬಂಧವು ಬದಲಾಗಿರುವಾಗ, ಹೆರೋದನು ಯೇಸುವಿನ ಅನುಯಾಯಿಗಳನ್ನು ಹಿಂಸಿಸಲು ನಿರ್ಣಯಿಸಿದನು.

ಇನ್ನೊಂದು ವಿವರಣೆಯು ಈ ಹಿಂಸೆಯನ್ನು ಪ್ರತ್ಯೇಕವಾಗಿ ತಿಳಿಸುತ್ತದೆ. ಮೂಲತಃ ಸಭಾಮಂಡಳಿಯು ಅಪೊಸ್ತಲರನ್ನು ಬಂಧಿಸಿದ್ದರು, ಆದರೆ ಅವರನ್ನು ಸೆರೆಮನೆಯಲ್ಲಿಡಲು ಅಥವಾ ಮೌನವಾಗಿರಿಸಲು ಅವರಿಂದ ಸಾಧ್ಯವಾಗಲಿಲ್ಲ. ಮುಂದುವರೆದ ಈ ಹಿಂಸೆಯು 12 ಜನರನ್ನು ಹೊರತು ಪಡಿಸಿ ಸಭೆಯಲ್ಲಿದ್ದ "ಸಾಧಾರಣ" ವ್ಯಕ್ತಿಗಳ ಕಡೆಗೆ ತಿರುಗಿತು (8:1). ಹೆರೋದನು ಪುನಃ ಅಪೊಸ್ತಲರ ಮೇಲೆ ದೃಷ್ಟಿಯಿಟ್ಟನು. ಅವರುಗಳು ಹಿಡಿದಿಡಲಾಗದ ನಾಯಕರಾಗಿದ್ದರು. 12 ಜನರಲ್ಲಿ ಒಬ್ಬನನ್ನು ಕೊಂದು ಹಾಕಿದ ಯಶಸ್ವಿಯ ವಿಷಯವು ಸಭೆಯ ಒಳಗೂ ಮತ್ತು ಹೊರಗಿದ್ದ ಜನರಿಗೆ ಅಚ್ಚರಿಯನ್ನುಂಟು ಮಾಡಿತು. ಹೆರೋದನ ಚಿಕ್ಕಪ್ಪನಾದ, ಅಂತಿಪನು, ಸ್ನಾನಿಕನಾದ ಯೋಹಾನನ ತಲೆಯನ್ನು ಕತ್ತರಿಸಬೇಕೆಂಬ ಆದೇಶವನ್ನು ನೀಡಿದ್ದನು, ಮತ್ತು ಈ ಹೆರೋದನು ಸಹ ಅದೇ ತಂತ್ರವನ್ನು ಉಪಯೋಗಿ ಸಿದನು. "ಅವನು ಕೈ ಹಾಕಿ ಯೋಹಾನನ ಅಣ್ಣನಾದ ಯಾಕೋಬನನ್ನು ಕತ್ತಿಯಿಂದ ಕೊಲ್ಲಿಸಿದನು" (12:2).[5]

ಲೂಕನು ಈ ಘಟನೆಯನ್ನು ಭಯಂಕರ ಎಂದು ದಾಖಲು ಮಾಡದೇ[6] ಕೇವಲ 7 ಪದಗಳನ್ನು ಮೂಲ ವಾಕ್ಯದಲ್ಲಿ ಪ್ರಯೋಗಿಸಿ ಮೊದಲ ಅಪೊಸ್ತಲನ ಮರಣ ಶಿಕ್ಷೆಯನ್ನು ತಿಳಿಸಿರುವನು! ಕೊಲ್ಲಲ್ಪಟ್ಟಂತ ಈ ಯಾಕೋಬನು ಯೇಸುವಿನ ಸಮೀಪವರ್ತಿಯಾಗುವ ಅವಕಾಶವನ್ನು ಪಡೆದಿದ್ದನು.[7] ಯಾಕೋಬನ ಮತ್ತು ಯೋಹಾನನ ತಾಯಿಯು, ರಾಜಕೀಯವಾದ ರಾಜ್ಯದ[8] ಕುರಿತು ಯೋಚಿಸಿ, ಆಕೆಯ ಮಕ್ಕಳು ಯೇಸುವಿನ ಬಲಗಡೆಯಲ್ಲೂ ಮತ್ತು ಎಡಗಡೆಯಲ್ಲೂ ಇರುವ ಅಧಿಕಾರವನ್ನು ಪಡೆಯಲು ಮನವಿಯನ್ನು

ಇಟ್ಟಾಗ ಯೇಸು ಯಾಕೋಬನ ಮರಣದ ಕುರಿತಾಗಿ ಪ್ರವಾದನೆ ನೀಡಿದ್ದನು. ಯೇಸು ಆಶ್ಚರ್ಯಚಕಿತನಾಗಿದ್ದನು, ಆತನು ಯಾಕೋಬ ಮತ್ತು ಯೋಹಾನನಿಗೆ, "ನೀವು ಬೇಡಿ ಕೊಂಡಿದ್ದು ಏನೆಂದು ನಿಮಗೆ ತಿಳಿಯದು," "ನಾನು ಕುಡಿಯಬೇಕಾಗಿರುವ ಪಾತ್ರೆಯಲ್ಲಿ ನೀವು ಕುಡಿಯುವದು ನಿಮ್ಮಿಂದಾದಿತೇ?" (ಮತ್ತಾಯ 20:22). ಯೇಸು ತನಗೆ ಉಂಟಾಗುವ *ಸಂಕಟದ* ಪಾತ್ರೆಯ ಕುರಿತಾಗಿ ಮಾತನಾಡುತ್ತಿದ್ದನು. ಯಾಕೋಬ ಮತ್ತು ಯೋಹಾನರು "ಆಗುವದೆಂದು" ಉತ್ತರಿಸಿದರು. ನಂತರ ಯೇಸು ದುಃಖದಿಂದ "ನನ್ನ ಪಾತ್ರೆಯಲ್ಲಿ ನೀವು ಕುಡಿಯುವಿರಿ *ಸರಿ* ಎಂದನು; ..."[9] (ಮತ್ತಾಯ 20:22, 23; ಒತ್ತಿ ಹೇಳಿದ್ದು ನನ್ನದು). ಯಾಕೋಬನು ತನ್ನ ಕುತ್ತಿಗೆಯನ್ನು ಕತ್ತರಿಸುವ ಮಣಿಯಲ್ಲಿ ಇಡಲ್ಪಟ್ಟಿರುವಾಗ ಈ ಪದಗಳ ನೆನಪು ಅವನಿಗುಂಟಾಗಿರಬಹುದು. "ನಾನು ಇದನ್ನೆ ಕೇಳಿರುವೆನೋ?" ಎಂದು ಆಲೋಚಿ ಸಿರಬಹುದು.[10]

ಜನರು ಇದಕ್ಕೆ ಪ್ರತಿಕ್ರಿಯಿಸಿ ಹೆರೋದನು ಯಾಕೋಬನ ತಲೆಯನ್ನು ಶಿರಛ್ಛೇದನ ಮಾಡಲು ಮಾತ್ರ ಸಾಧ್ಯವಾಗಿತ್ತೆಂದು ಆಲೋಚಿಸಿದರು: ಹೆರೋದನ ನಿರೀಕ್ಷೆಯಂತೆ "ಇದು ಯೆಹೂದ್ಯರಿಗೆ ಮೆಚ್ಚಿಗೆಯಾಗಿದೆ ಎಂದು ನೋಡಿದನು" (ವಚನ 3ಎ). ಅಷ್ಟಕ್ಕೆ ನಿಲ್ಲದೇ ಮೂರನೆಯ ಸಂಖ್ಯೆಯ ಅಪೋಸ್ತಲನನ್ನು ಕೊಲ್ಲುವದರ ಮೂಲಕ ಅವರಿಗೆ ಸಂತೋಷ ವುಂಟಾಯಿತೆಂದು ತಿಳಿದು, ಒಂದನೆಯ ಸಂಖ್ಯೆಯ ಅಪೊಸ್ತಲನನ್ನು ಕೊಲ್ಲುವದಾದರೆ ಅರಸನ ಜನರು ಜೀವನ ಪರ್ಯಾಂತ ನಿಷ್ಟೆಯಿಂದಿರುವರೆಂದು ತಿಳಿದನು! "ಅಷ್ಟಕ್ಕೆ ನಿಲ್ಲದೆ ಪೇತ್ರನನ್ನು ಹಿಡಿಸಿದನು," ಮತ್ತು "ಅವನನ್ನು ಸೆರೆಯಲ್ಲಿ ಹಾಕಿಸಿ ನಾಲ್ಕು ನಾಲ್ಕು ಸಿಪಾಯಿಗಳಿದ್ದ ನಾಲ್ಕು ಗುಂಪುಗಳ ವಶಕ್ಕೆ ಕೊಟ್ಟನು" (ವಚನಗಳು 3ಬಿ, 4ಎ).

ಲೂಕನು, ಪೇತ್ರನನ್ನು ಹಿಡಿದ ಕುರಿತು ತನ್ನ ಬರಹದಲ್ಲಿ, "ಆ ಕಾಲದಲ್ಲಿ ಹುಳಿಯಿಲ್ಲದ ರೊಟ್ಟಿಯ ಹಬ್ಬ ನಡೆಯುತ್ತಿತ್ತು" (ವಚನ 3ಸಿ) ಎಂದು ಬರೆದಿರುವನು. ಹುಳಿಯಿಲ್ಲದ ರೊಟ್ಟಿಯ ಹಬ್ಬವು ಒಂದು ವಾರಗಳ ಕಾಲ ಆಚರಿಸಲ್ಪಟ್ಟು, ಪಸ್ಕ ಹಬ್ಬದ ಮುಂದುವರಿಕೆಯಾಗಿತ್ತು. ಹೊಸ ಒಡಂಬಡಿಕೆಯ ಸಮಯದಲ್ಲಿ, ಅವೆರಡನ್ನು ಒಟ್ಟು ಗೂಡಿಸಿ ಪಸ್ಕವೆಂದು ಆಚರಿಸಿದರು.[11] ಹೆರೋದನು ಯೆರೂಸಲೇಮನ್ನು ಸಂಧಿಸಿದ ಕಾರಣವನ್ನು ಲೂಕನು ನೀಡುತ್ತಿರಬಹುದು, ಪಸ್ಕದಂತ ವಿಶೇಷ ಹಬ್ಬಕ್ಕಾಗಿ, ರೋಮಾ ಅಧಿಕಾರಿಗಳು ಕೈಸರೈ ಯಿಂದ ಯೆರೂಸಲೇಮಿಗೆ ಬರುತ್ತಿದ್ದರು. ಲೂಕನು ಹೆರೋದನ ಕುರಿತಾಗಿ ಅವನು ತನ್ನನ್ನು ತಾನೇ ತೋರ್ಪಡಿಸಿಕೊಳ್ಳುವ ವ್ಯಕ್ತಿಯಾಗಿದ್ದನು ಎಂಬ ಸೂಚನೆಯನ್ನು ನೀಡಿರುವನು,[12] ಪಸ್ಕದ ಸಮಯದಲ್ಲಿ, ಯೆರೂಸಲೇಮು ಯೆಹೂದ್ಯ ಜನರಿಂದ ಕಿಕ್ಕಿರಿದುಕೊಂಡಿರುತ್ತಿದ್ದ ಸಮಯವನ್ನೇ ಅವನು ಆರಿಸಿಕೊಂಡನು.

ಹೇಗೂ, ಹಬ್ಬದ ಸಮಯದಲ್ಲಿ ಹಿಂಸೆಯನ್ನು ನೀಡುವದು ಹೆರೋದನಿಗೆ ಕಷ್ಟಕರವಾಗಿತ್ತು. ಯಾಕೋಬನನ್ನು ಹಿಡಿಸಿ ಕೊಲ್ಲುವಂಥದ್ದು ಸರಳವಾಗಿ ನಡೆದು ಹೋಗಿತ್ತು; ಹಬ್ಬದ ಸಮಯದಲ್ಲಿ ಇದು "ಘೋರ" ಕೃತ್ಯವಾಗಿತ್ತು. ಪೇತ್ರನನ್ನು ಹಿಡಿಯುವ ಸಮಯದಲ್ಲಿ, ಹಬ್ಬವು ಹತ್ತಿರವಾಗಿತ್ತು, ಹಬ್ಬದ ಸಮಯದಲ್ಲಿ, ಸಾರ್ವಜನಿಕವಾಗಿ ಕೊಲ್ಲುವುದು ಯೆಹೊದ್ಯರ ಪದ್ಧತಿಗೆ ವಿರುದ್ಧವಾಗಿತ್ತು (ಮಾರ್ಕ 14:2). ಆದ್ದರಿಂದ ಹೆರೋದನಿಗೆ ಈ ಸಮಯದಲ್ಲಿ, ಹಿನ್ನಡೆ ಉಂಟಾಯಿತು. ಅದಕ್ಕಾಗಿ ವಾರಗಳ ಕಾಲ ಸಿದ್ಧತೆಗಳು ನಡೆದಿದ್ದವು, "ಆದ್ದರಿಂದ, ಅವನನ್ನು ಹಬ್ಬವಾದ ನಂತರ[13] ಜನರ ಮುಂದೆ ತರಿಸಬೇಕೆಂದಿದ್ದನು" (ಅಪೊಸ್ತಲರ ಕೃತ್ಯಗಳು 12:4ಬಿ). ಯಾಕೋಬನಿಗೆ ಮಾಡಿದ ಕಾರ್ಯವನ್ನೇ ಪ್ರೇತ್ರನಿಗೂ ಮಾಡಲು ಹೆರೋದನು ಬಯಸಿದನು (12:11).[14]

ಹಬ್ಬದ ಏಳು ದಿವಸಗಳ ಕಾಲದಲ್ಲಿ, ಪೇತ್ರನು ತಪ್ಪಿಸಿಕೊಳ್ಳದಂತೆ ಹೆರೋದನು ಯೋಜನೆಯನ್ನು ಮಾಡಿದ್ದನು. ಯೆರೂಸಲೇಮಿನ[15] ರೋಮಾಯರ ಸೆರೆಮನೆಯನ್ನು ಭದ್ರಪಡಿಸಿದ್ದನು. ರಾಜಕೀಯ ಸೆರೆಯಾಳುಗಳನ್ನು ಸೆರೆಮನೆಯ ಸಾಧಾರಣವಾದ ಸ್ಥಳದಲ್ಲಿ

ಇಡಲಾಗುತ್ತಿತ್ತು. ಪೇತ್ರನಿಗೂ ಮತ್ತು ಅವನ ಸ್ವಾತಂತ್ರಕ್ಕೂ ಅಂತರವಿರುವಂತೆ ಮೂರು ಬೀಗಗಳಿಂದ ಅವನ ಸೆರೆಮನೆಯ ಕೋಣೆಯನ್ನು ಭದ್ರಪಡಿಸಲಾಗಿತ್ತು (ವಚನ 10). ಸಾಮಾನ್ಯವಾಗಿ ರಾಜಕಾರಣಿಗಳಿಗೆ ವಿಶೇಷ ಕಾವಲನ್ನು ಹಾಕುತ್ತಿರಲಿಲ್ಲ; ಅಥವಾ ವಿಶೇಷ ನಿಗ ಇಡುತ್ತಿರಲಿಲ್ಲ, ಆದರೆ ಹೆರೋದನು ಪೇತ್ರನನ್ನು ಸೆರೆಹಿಡಿದಾಗ, "*ನಾಲ್ಕು ಗುಂಪು,*[16] *ಅಂದರೆ, ಹದಿನಾರು ಸಿಪಾಯಿಗಳನ್ನು* ಅವರ ಕಾವಲಿಗೆ ನೇಮಿಸಿದನು" (ವಚನ 4ಎ; ಒತ್ತಿ ಹೇಳಿದ್ದು ನನ್ನದು). (ನಾಲ್ಕು ಜನ ಸಿಪಾಯಿಗಳು - ಮೂರರಿಂದ ನಾಲ್ಕು ತಾಸುಗಳಿಗೆ ಬದಲಾಗುತ್ತಿದ್ದರು.) ಅತಿ ಗಂಭೀರ ಪರಿಸ್ಥಿತಿಯಲ್ಲಿ, ರಾತ್ರಿ ಸಮಯದಲ್ಲಿ ಸೆರೆವಾಸಿಯನ್ನು ಒಬ್ಬ ಸಿಪಾಯಿಯೊಂದಿಗೆ ಸರಪಣಿಯಿಂದ ಬಿಗಿಯಲಾಗಿರುತ್ತಿತ್ತು, ಆದರೆ ಪ್ರತಿ ಸಾಯಂಕಾಲ, ಪೇತ್ರನನ್ನು ಇಬ್ಬರು ಸಿಪಾಯಿಗಳೊಂದಿಗೆ ಬೇಡಿಯಿಂದ ಬಂಧಿಸಲಾಗುತ್ತಿತ್ತು (ವಚನ 6). ಮೂರನೆಯ ಸಿಪಾಯಿಯ ಸೆರೆಮನೆಯ ಹೊರಗೆ ಕಾಯುತ್ತಿದ್ದನು. ನಾಲ್ಕನೆಯವನು, ಒಳಕೋಣೆಗೂ ಮತ್ತು ಹೊರ ಬರುವ ಜಾಗಕ್ಕೂ ನಡುವೆ ಕಾಯುತ್ತಿದ್ದನು (ವಚನ 10). ಸಾಧಾರಣವಾದ ಬಂಧನಕ್ಕಿಂತಲೂ ಹೆಚ್ಚಾದ ಗಮನವನ್ನು ಪೇತ್ರನಿಗೆ ನೀಡಲಾಗಿತ್ತು. ಮಾನವ ದೃಷ್ಟಿಯಲ್ಲಿ, ಪೇತ್ರನು ಸೆರೆಮನೆಯಿಂದ ತಪ್ಪಿಸಿಕೊಳ್ಳುವದು *ಅಸಾಧ್ಯವಾಗಿತ್ತು.* ಯೆಹೂದ್ಯ ಮಂಡಳಿಯವರಿಗೆ ಹೆರೋದನು "ಪೇತ್ರನ ಭದ್ರತೆಯ ಬಗ್ಗೆ ನಿಮಗೆ ಆಶ್ಚರ್ಯವುಂಟಾಗಿರಬಹುದು, ಅದನ್ನು ನಿಮಗೆ ತಿಳಿಸುತ್ತೇನೆ!" ಎಂಬ ಹೇಳಿಕೆಯನ್ನು ಅವನು ಹೇಳಿರಬಹುದೆಂದು ನಾನು ಊಹಿಸುತ್ತೇನೆ.

ಯಾಕೋಬನ ಮರಣಕ್ಕಾಗಿ ಅನೇಕರು ಕಣ್ಣೀರು ಸುರಿಸುತ್ತಿದ್ದು, ಪೇತ್ರನ ಸೆರಮನೆಯ ಸ್ಥಿತಿಗಾಗಿ ಚಿಂತಿಸುತ್ತಿದ್ದರು. ಈ ವಿಷಯವನ್ನು ಗಮನಿಸಿ: ಈ ಲೋಕದಲ್ಲಿ ಕ್ರೈಸ್ತರಿಗೆ ಸಂಕಟವುಂಟು, ಸೈತಾನನು ಜಯಿಸಿದನೆಂದು ತಿಳಿಯುತ್ತೇವೆ. ಇವುಗಳನ್ನು ನಾವುಗಳು ಎದುರಿಸಲೇಬೇಕು. ಅವುಗಳು ಮೊದಲ ಶತಮಾನದಲ್ಲಿ ಇದ್ದದ್ದರಿಂದ ಈ ದಿನವೂ ಅಸ್ತಿತ್ವದಲ್ಲಿವೆ. 12ನೇ ಅಧ್ಯಾಯದಿಂದ ಕೆಲವೇ ವಚನಗಳನ್ನು ನಾವು ನಮ್ಮ ಪಾಠದಲ್ಲಿ ಅಧ್ಯಯನ ಮಾಡಿರುವೆವೆಂದು ನೆನಪುಮಾಡಿಕೊಳ್ಳೋಣ. ಕಥೆಯು ಇನ್ನೂ ಪೂರ್ಣಗೊಂಡಿರುವದಿಲ್ಲ! ಈ ಕಾದಂಬರಿಯ ಕಥೆಯು ಮೊದಲ ಕೆಲವು ಪುಟಗಳಲ್ಲೇ ಅಂತ್ಯಗೊಳ್ಳುವದಿಲ್ಲ; ಪುಟದ ಅಂತ್ಯದಲ್ಲಿರುವ ಕಥೆಯ ಅಂತ್ಯವನ್ನು ನೀವು ಗಮನಿಸಲೇ ಬೇಕು. ಪೇತ್ರನ ಪರಿಸ್ಥಿತಿಯಂತೆಯೇ, ನಿಮ್ಮ ಸ್ಥಿತಿಯು ಅಸಾಧ್ಯ ವಾಗಿರಬಹುದು, ಆದರೆ ದೇವರು ತನ್ನ ಅಂತಿಮ ನಿರ್ಣಯವನ್ನು ತಿಳಿಸಿರುವದಿಲ್ಲ! ಸಂಕಟ, ಶೋಧನೆಗಳು ನಿಮಗೆ ಉಂಟಾಗುವಾಗ, ದೂರದೃಷ್ಟಿಯಿಂದ ದೇವರಲ್ಲಿ ಭರವಸವಿಡಿರಿ!

## ಪ್ರಾರ್ಥನೆ ಹಾಗೂ ತಾಳ್ಮೆ (12:5, 6, 12)

ಬಹು ಪ್ರಮುಖವಾದ ಸಭಾನಾಯಕನು ಈಗ ಸೆರೆಮನೆಯಲ್ಲಿದ್ದನು: ಈಗ ಸಭಾಸದಸ್ಯರು ಏನು ಮಾಡಬೇಕು? ಕೆಲವು ಸಂದರ್ಭಗಳಲ್ಲಿ ಈ ದೇಶದ ಜನರನ್ನು ಸೆರೆ ಹಿಡಿದು ಬೇರೆ ದೇಶಗಳಲ್ಲಿ ರಾಜಕೀಯ ಸೆರೆಯಾಳುಗಳನ್ನಾಗಿ ಮಾಡಿರುವರು.[17] ಈ ಘಟನೆಯು ಉಂಟಾಗುವಾಗ, ದೇಶದಲ್ಲಿರುವವರಿಗೆಲ್ಲಾ ಈ ಕುರಿತು ಕೋಪ ಉಂಟಾಗುತ್ತದೆ, ಅವರನ್ನು ಬಿಡಿಸಲು ಅನೇಕ ತಂತ್ರಗಳನ್ನು ಮಾಡಲಾಗುತ್ತದೆ. ಸಭೆಯು ಸಹ ಇದೇ ತಂತ್ರವನ್ನು ಮಾಡಿರಬಹುದು. ಕೋಪಗೊಂಡವರು ಆ ಸ್ಥಳಕ್ಕೆ ಧಾವಿಸಿರಬಹುದು. ನೇರವಾಗಿ ಹೇಳುವದಾದರೆ, ಇದಾವ ತಂತ್ರಗಳು ಫಲಕಾರಿಯಾಗಲಿಲ್ಲ. ಮಾನವ ತಂತ್ರದಿಂದ ಏನನ್ನು ಸಾಧಿಸಲು ಸಾಧ್ಯವಾಗಲಿಲ್ಲ.

ಅವರು ಏನನ್ನೂ ಮಾಡಲು ತೋಚದೆ ಇರುವಾಗ, ಅವರು ಮಾಡಿದ್ದಾದರೂ ಏನು? ಅವರು ಆಯುಧಗಳನ್ನು ತೆಗೆದುಕೊಳ್ಳುವ ಬದಲು, ಮೊಣಕಾಲುಗಳನ್ನು ಊರಿ, "ಪೇತ್ರನು ಸೆರೆಮನೆಯೊಳಗೆ ಕಾವಲಲ್ಲಿದ್ದಾಗ ಸಭೆಯವರು ಅವನಿಗೋಸ್ಕರ ಆಸಕ್ತಿಯಿಂದ ದೇವರಿಗೆ ಪ್ರಾರ್ಥನೆ ಮಾಡುತ್ತಿದ್ದರು" (ವಚನ 5). ಪಟ್ಟಣಗಳಲ್ಲಿ ಇದ್ದವರು ತಮ್ಮ ಮನೆಗಳಲ್ಲಿ

ಸೇರಿ, ಅಪೊಸ್ತಲನಿಗಾಗಿ ಪ್ರಾರ್ಥಿಸಿದರು; ಪ್ರತಿನಿತ್ಯವೂ, ಅನೇಕ ರಾತ್ರಿಗಳ ಕಾಲ ಅವರು ಪ್ರಾರ್ಥಿಸಿದರು (ವಚನ 12). ಹೆರೋದನು ಸೆರೆಮನೆಯ ಬಾಗಿಲನ್ನು ಮುಚ್ಚಿದ್ದನು, ಆದರೆ ಪರಲೋಕದ ಬಾಗಿಲನ್ನು ಮುಚ್ಚಲಾರದವನಾದನು.

ಸಭೆಯು ಮಾಡಿದ ಪ್ರಾರ್ಥನೆಯ ಕುರಿತು ಮೊದಲಿಗೆ ಹೆಚ್ಚು ಪ್ರಭಾವ ಕಾಣದೆ ಹೋದರೂ, ಅದರ ಕುರಿತು ಪುನಃ ಯೋಚಿಸಿರಿ. ಸಭೆಯು ಪ್ರಾರ್ಥನೆಯಲ್ಲಿ ಮಂದುವರಿಯಲು ಅನೇಕ ಅಡಚಣೆಗಳು ಇದ್ದವು. ಅವರು *ಅಧೈರ್ಯಗೊಂಡಿದ್ದರು.* ಯಾಕೋಬನಿಗಾಗಿ ಅವರು ಪ್ರಾರ್ಥಿಸಲಿಲ್ಲವೇ? ಯಾಕೋಬನ ಮರಣವು ಅತಿಶೀರ್ಘವಾಗಿ ಜರುಗಿದ್ದರೂ, ಅವನಿಗಾಗಿ ಅನೇಕರು ಪ್ರಾರ್ಥಿಸಿದ್ದರು. ಆದಾಗ್ಯೂ, ಯಾಕೋಬನು ಮರಣ ಹೊಂದಿದ್ದನು. "ಪ್ರಾರ್ಥನೆಯ ನಿಮಿತ್ತವು ಯಾಕೋಬನು ಮರಣ ಹೊಂದಿದ್ದರೆ, ಪೇತ್ರನು ಪಾರಾಗುವದು ಸಾಧ್ಯವಿತ್ತೇ?" ನಂತರ ಅಲ್ಲಿ ತಡವಾದ ಅಡಚಣೆ ಉಂಟಾಯಿತು. ಪೇತ್ರನಿಗಾಗಿ ಅವರು ಏಳು ದಿವಸಗಳ ಕಾಲ ಪ್ರಾರ್ಥಿಸಿದ್ದರು (ವಚನ 6), ಆದರೆ ಪರಿಣಾಮವೇನು ಆಗಲಿಲ್ಲ. ಸಾಧ್ಯವಿಲ್ಲ ಎಂಬುದು ಸರಳವಲ್ಲವೇ? ಅಧೈರ್ಯದ *ಅಡಚಣೆವುಂಟಾಯಿತು*, ಸಭೆಯು ಒಂದಾದ ನಂತರ ಮತ್ತೊಂದು ಸಮಸ್ಯೆಗೆ ಸಿಲುಕಿತು: ಒಬ್ಬ ಅಪೊಸ್ತಲನು ಸಂಹಾರವಾಗಿದ್ದನು, ಇನ್ನೊಬ್ಬನು ಸೆರೆಮನೆಯಲ್ಲಿದ್ದನು. ಸಕಲ ಶಕ್ತಿಗಳು ಅವರಿಗೆ ವಿರೋಧವಾಗಿ ಒಂದಾಗಿದ್ದವು; ಅಸಾಧ್ಯ ವಾದ ಸಂಧರ್ಭ ಉಂಟಾಯಿತು ... ಅಧೈರ್ಯದ ಸಾಧ್ಯತೆಯು ಹೆಚ್ಚಾಯಿತು, ಆದಾಗ್ಯೂ ಅವರು ಪ್ರಾರ್ಥಿಸಿದರು.

ಅವರ ಪ್ರಾರ್ಥನೆಯ ಸಾರಾಂಶವನ್ನು ಅರಿಯಲು ಇಚ್ಚಿಸುತ್ತೇನೆ ಈಗಾಗಲೇ ಕರ್ತನು ಅಪೊಸ್ತಲನನ್ನು ಅದ್ಭುತವಾಗಿ ಕಾಪಾಡಿದ್ದನು (5:19, 20), ಆ ಕಾರ್ಯವೇ ಪುನಃ ಜರುಗಲಿ ಎಂದು ಪ್ರಾರ್ಥಿಸಿರಬಹುದು. (ಯಾಕೋಬನು ಹೆರೋದನ ಸೆರೆಯಿಂದ ಬಿಡುಗಡೆ ಹೊಂದಿರಲಿಲ್ಲ.) ಯಾಕೆಂದರೆ, ಯೇಸುವನ್ನು ಅರಿಕೆ ಮಾಡಲು ಪೇತ್ರನು ಹಿಂಜರಿದಿದ್ದರಿಂದ, ಅವನನ್ನು ಗಲ್ಲಿಗೆ ಏರಿಸುವಾಗ, ಪೇತ್ರನ ನಂಬಿಕೆಯು ದೃಢವಾಗಿರಲಿ ಎಂದು ಪ್ರಾರ್ಥಿಸಿರಬಹುದು. (ಪಂಚಾಶತ್ತಮ ಹಬ್ಬದ ದಿವಸದಿಂದ, ಪೇತ್ರನು, ಎದುರಿಸಲ್ಪಟ್ಟಿರಲಿಲ್ಲ, ದೃತಿಗೆಟ್ಟಿರಲಿಲ್ಲ. ಆದ್ದರಿಂದ ಅವನು ಹಿಂಜರಿಯುವುದು ಅಸಾಧ್ಯವಾಗಿತ್ತು.) ಒಬ್ಬಬ್ಬರೂ ಒಂದೊಂದು ಪ್ರಾರ್ಥನೆಯನ್ನು ಮಾಡಿರಬಹುದು. ಒಂದು ವೇಳೆ ಕೆಲವರು ಪ್ರಾರ್ಥನೆಯ ಅಂಶವನ್ನು ಅರಿಯದೆ ಇರಬಹುದು (ರೋಮಾಪುರ 8:26) ಆದುದರಿಂದ ಆ ವಿಷಯವನ್ನು ಕರ್ತನ ಕೈಗೆ ಒಪ್ಪಿಸಿರಬಹುದು. ಅವರ ಪ್ರಾರ್ಥನೆಯ ಅಂಶವು *ಏನೇ ಇರಲಿ,* ಅವರು ದೇವರನ್ನೇ ಅವಲಂಭಿಸಿದ್ದರು.

ಅವರ ಪ್ರಾರ್ಥನೆಗೆ ಸದುತ್ತರವಾಗಿ ಮತ್ತು ಪೇತ್ರನ ಬಿಡುಗಡೆ ಉಂಟಾಗುವ ಮೊದಲು, ಸೆರೆಮನೆಯ ಹೊರಗಡೆಯಲ್ಲಿ ನಡೆದ ಘಟನೆಯಿಂದ, ಸೆರೆಮನೆಯ ಒಳಗಡೆ ಉಂಟಾದ ವಿಷಯವನ್ನು ಕ್ಷಣಕಾಲ ಯೋಚಿಸೋಣ. ವಚನ 6ರಲ್ಲಿ ಹೆರೋದನು ಅವನನ್ನು ಜನರ ಮುಂದೆ ತರಿಸಬೇಕೆಂದಿದ್ದ ದಿವಸದ ಹಿಂದಿನ "*ರಾತ್ರಿಯಲ್ಲಿ ಇಬ್ಬರು* ಸಿಪಾಯಿಗಳ ನಡುವೆ ಪೇತ್ರನು ನಿದ್ದೆ ಮಾಡುತ್ತಿದ್ದನು." (ಒತ್ತಿ ಹೇಳಿದ್ದು ನನ್ನದು.) ನನ್ನ ತಲೆಯು ದೇಹದಿಂದ ಹಿಬ್ಬಾಗವಾಗುವುದು ಎಂದು ತಿಳಿದ ರಾತ್ರಿ ನಾನು ನಿದ್ರೆ ಮಾಡಬಹುದೇ? ಅದರಲ್ಲಿ ಸಂದೇಹ ವಿದೆ. ಇಬ್ಬರು ವ್ಯಕ್ತಿಗಳ ಸಂಗಡ ಪೇತ್ರನು ಬೇಡಿ ಗಳನ್ನು ಧರಿಸಿದವನಾಗಿದ್ದರೂ ಆ ತಣ್ಣನೆಯ ರಾತ್ರಿಯಲ್ಲಿ, ಸೆರೆಮನೆಯ ನೆಲದ ಮೇಲೆ ಇಕ್ಕಟ್ಟಿನಲ್ಲಿ ನಿದ್ರಿಸುತ್ತಿದ್ದನು. ಏನೇ ಆದರೂ ಅದು ನಿದ್ರಿಸುವ ಸನ್ನಿವೇಶವಾಗಿರಲಿಲ್ಲ, ಆದಾಗ್ಯೂ ಪೇತ್ರನು ನಿದ್ದೆ ಮಾಡಿದನು. ಅವನು ಘಾಡವಾಗಿ ನಿದ್ರಿಸಿದ್ದರಿಂದ ದೇವರ ದೂತನು ಸಹ ಅವನನ್ನು ಎಚ್ಚರಿಸಲು ಕಷ್ಟವಾಯಿತು!

ಪೇತ್ರನು ದೇವರಲ್ಲಿ ಭರವಸೆ ಇಟ್ಟಿದ್ದರಿಂದ, ಅವನು ನಿದ್ರಿಸಲು ಸಾಧ್ಯವಾಯಿತ ಲ್ಲವೇ?[18] ಏನೇ ಸಂಭವಿಸಿದರೂ ಅದು ದೇವರ ಮಹಿಮೆಗಾಗಿ ಎಂದು ಸಹಜವಾಗಿ ನಂಬಿದ್ದನು. ಆದುದರಿಂದ, ಅವನ ಬಳಿಯಲ್ಲಿದ್ದ ಇಬ್ಬರು ಸಿಪಾಯಿಗಳು ಇದು ನಿದ್ರೆಯ

ಸಮಯ ಎಂದು ಹೇಳಿದಾಗ, ಅವನು ಪ್ರಾರ್ಥಿಸಿ, ಅದರ ನಡುವೆ ತಣ್ಣಗಿರುವ ನೆಲದ ಮೇಲೆ ಮಲಗಿಕೊಂಡನು. ಸಂಕಟದ ಸಮಯದಲ್ಲಿ, ನಿದ್ರೆಯು ನಮ್ಮಿಂದ ದೂರವಾಗುತ್ತದೆ, ಸರ್ವಶಕ್ತನಾದ ದೇವರಲ್ಲಿ ಭರವಸವಿಡುವುದರಿಂದ ನಾವುಗಳು ನಿದ್ರಿಸಲು ಸಾಧ್ಯ. ಕೀರ್ತನೆಗಾರನು ಬರೆದು, "ನಾನು ನಿರ್ಭಯವಾಗಿರುವುದರಿಂದ ಮಲಗಿಕೊಂಡು ಕೂಡಲೆ ನಿದ್ದೆ ಮಾಡುವೆನು, ಯಾಕೆಂದರೆ ಯೆಹೋವನೇ, ನಾನು ಯಾವ ಅಪಾಯವೂ ಇಲ್ಲದೆ ಸುರಕ್ಷಿತನಾಗಿರುವಂತೆ ನೀನು ಕಾಪಾಡುತ್ತೀ" (ಕೀರ್ತನೆಗಳು 4:8). ಕ್ರೈಸ್ತರ ಆಂತರ್ಯದಲ್ಲೂ ಮತ್ತು ಸೆರಮನೆಯ ಆಚೆಯಲ್ಲಿಯೂ ಪೇತ್ರ ಹಾಗೂ ಸಭೆಯು ಪ್ರಾರ್ಥನೆ ಮತ್ತು ತಾಳ್ಮೆಯನ್ನು ಸಾಧರಪಡಿಸಿದರು.

## ಬಲ ಮತ್ತು ಪ್ರಗತಿ (12:6-17, 24)

ನಮ್ಮ ಎಡಬಿಡದ ಪ್ರಾರ್ಥನೆಗೂ ಹಾಗೂ ದೀರ್ಘಶಾಂತಿಗೂ, ದೇವರಿಂದ ದೊರಕುವ ಪ್ರತಿಫಲವೇನೆಂದು ನಾವು ಅರಿಯದೆ ಇರಬಹುದು. ಮುಂದಿನ ಕೆಲ ವಚನಗಳು ಪ್ರಾರ್ಥನೆಯಿಂದುಟಾಗುವ ಪರಾಕ್ರಮದ ಕಥೆಯನ್ನು ಹೇಳುತ್ತವೆ.

> ಹೆರೋದನು ಅವನನ್ನು ಜನರ ಮುಂದೆ ತರಿಸಬೇಕೆಂದಿದ್ದ ದಿವಸದ ಹಿಂದಿನ ರಾತ್ರಿಯಲ್ಲಿ ಪೇತ್ರನು ಎರಡು ಸರಪಣಿಗಳಿಂದ ಕಟ್ಟಲ್ಪಟ್ಟವನಾಗಿ ಇಬ್ಬರು ಸಿಪಾಯಿಗಳ ನಡುವೆ ನಿದ್ದೆ ಮಾಡುತ್ತಿದ್ದನು. ಕಾವಲುಗಾರರು ಬಾಗಿಲ ಮುಂದೆ ನಿಂತು ಸೆರೆಮನೆಯನ್ನು ಕಾಯುತ್ತಿದ್ದರು. ಪಕ್ಕನೆ ಕರ್ತನ ದೂತನು ಪೇತ್ರನೆದುರಿಗೆ ನಿಂತನು. ಅವನಿದ್ದ ಕೋಣೆಯಲ್ಲಿ ಬೆಳಕು ಹೊಳೆಯಿತು. ಅವನು ಪೇತ್ರ ನನ್ನು ಪಕ್ಕೆ ತಟ್ಟಿ ಎಬ್ಬಿಸಿ - "ತಟ್ಟನೆ ಏಳು ಅಂದನು." ಆಗಲೇ ಅವನ ಕೈಗಳಿಗೆ ಹಾಕಿದ್ದ ಸರಪಣಿಗಳು ಕಳಚಿಬಿದ್ದವು (ವಚನಗಳು 6, 7).

ಸತ್ಯವೇದದಲ್ಲಿ ಜರುಗಿರುವ ಅದ್ಭುತಗಳನ್ನು ನಂಬದೇ ಇರುವಂಥ ಕೆಲವರು ಸೆರೆಮನೆಯ ಒಳಗಡೆ ಆದಂತ ಘಟನೆಯನ್ನು "ತಿಳಿಸುವದಿಲ್ಲ." ಆ ಕತ್ತಲೆಯ ಸೆರೆಮನೆಯೊಳಗೆ ನಡೆದಿದ್ದಾರು ಏನು ದೂತನು ಅಂದರೆ ಕರ್ತನ "ಸಂದೇಶಕನು" ಎಂಬುವ ವಾಕ್ಯವು ಮಾನವ "ಸಂದೇಶಕನು" ಎಂಬುದಾಗಿಯೂ ಇರಬಹುದು. "ಸೆರೆಮನೆಯ ಒಳಗಡೆ ಒಬ್ಬನನ್ನು ಕಳುಹಿಸುವದಕ್ಕೆ ಕ್ರೈಸ್ತರು ಅವನಿಗೆ ಲಂಚವನ್ನು ನೀಡಿರಬಹುದು." ಎಂಥಾ ಮೂರ್ಖತನವಲ್ಲವೇ ಓದಿದ ವಾಕ್ಯವನ್ನು ಕ್ಷಣಕಾಲ ಗಮನಿಸಿರಿ, ಆ ದೂತನು ಬಂದಾಗ, ಅವನ ಕೋಣೆಯಲ್ಲಿ ಬೆಳಕನ್ನು ಉಂಟುಮಾಡಿದನು. ಆಗಲೇ ಪೇತ್ರನ ಕೈಗಳಿಗೆ ಹಾಕಿದ್ದ ಸರಪಣಿಗಳು ಕಳಚಿಬಿದ್ದವು. ಈ ರೀತಿಯಾಗಿ ಒಬ್ಬ ಮನುಷ್ಯನನ್ನು ಸೆರೆಮನೆಯಿಂದ ತಪ್ಪಿಸಬಹುದೇ? ಈ ರೀತಿಯಾದ ಯೋಜನೆಯಿಂದ ಸೆರಮನೆಯನ್ನು ತೆರೆಯುವುದನ್ನು ಕ್ರೈಸ್ತರು ಮಾಡಿರಲಿಲ್ಲ. ದೂತನು ಅಂದರೆ "ಸಂದೇಶಕನೆ" ಎಂಬುದು ಸತ್ಯವಾಗಿರಬಹುದು ಆದರೆ ಪೇತ್ರನು ದೃಢವಾಗಿ, "*ಕರ್ತನು* ತನ್ನ ದೂತನನ್ನು ಕಳುಹಿಸಿ, ಕೇಡಿನಿಂದ ತಪ್ಪಿಸಿದನು" ಎಂದು ಹೇಳಿರುವನು (ವಚನ 11; ಒತ್ತಿ ಹೇಳಿದ್ದು ನನ್ನದು).[19]

ಈ ಕಥೆಯಲ್ಲಿ ಒಂದು ತಮಾಷೆಯೂ ಇರಬಹುದು. ದೇವದೂತನು ಸೆರಮನೆಯ ಕೋಣೆಯಲ್ಲಿ ಪ್ರವೇಶಿಸಿದಾಗ, ಪೇತ್ರನನ್ನು ಎಬ್ಬಿಸುವದರಲ್ಲೂ, ಮತ್ತು ಅವನೊಂದಿಗೆ ನಡೆಯುವದರಲ್ಲೂ ದೇವದೂತನಿಗೆ ಕಷ್ಟವಾಯಿತು, ಅವನು ಪೇತ್ರನನ್ನು ಪಕ್ಕೆ ತಟ್ಟಿ "ಎಬ್ಬಿಸಿ ತಟ್ಟನೆ ಏಳು" ಅಂದನು: ಪೇತ್ರನು ಅರೆ ನಿದ್ರೆಯಲ್ಲಿ ಎಚ್ಚತ್ತಾಗ ಆಗಲೇ ಅವನ ಕೈಗಳಿಗಿದ್ದ ಸರಪಳಿಗಳು ಕಳಚಿಬಿದ್ದವು (ವಚನ 7). ನಂತರ, "ಆದೂತನು ಅವನಿಗೆ ನಡುಕಟ್ಟಿಕೊಂಡು ನಿನ್ನ ಕೆರಗಳನ್ನು ಮೆಟ್ಟಿಕೋ[20] ಎಂದು ಹೇಳಲೂ ಅವನು ಹಾಗೆ ಮಾಡಿದನು. ನಿನ್ನ ಮೇಲಂಗಿಯನ್ನು ಹಾಕಿಕೊಂಡು ನನ್ನ ಹಿಂದೆ ಬಾ ಅಂದನು" (ವಚನ 8). ನಾನು ನನ್ನ

ಆ ಹಳೆಯ ದಿನಗಳನ್ನು ಮೆಲುಕು ಹಾಕುತ್ತೇನೆ. ನಮ್ಮ ಮಕ್ಕಳು ಚಿಕ್ಕವರಿರುವಾಗ, ಅರೆ ನಿದ್ರೆಯಲ್ಲಿಯೇ ಅವರಿಗೆ ಬಟ್ಟೆಗಳನ್ನು ಹಾಕುತ್ತಿದ್ದೆವು: "ನಿನ್ನ ಕೈಗಳನ್ನು ಇಲ್ಲಿ ಹಾಕು, ತಲೆಯು ಆಕಡೆ ಇರಲಿ" ಪುನಃ ಹಾಸಿಗೆಯ ಮೇಲೆ ಮಲಗಬೇಡ! ಕಣ್ಣನ್ನು ತೆರೆ ... ಹೌದು ನಾನು ಸಹ ನಿದ್ರಿಸುತ್ತಿರುವೆನು ... ಇನ್ನೊಂದು ಕೈಯನ್ನು ಪ್ರಯತ್ನಿಸೋಣ ಎಂದು ಹೇಳುವದನ್ನು ನಾನು ನೆನಪಿಸಿಕೊಳ್ಳುವೆನು ... ."

ಪೇತ್ರನು ಅರೆನಿದ್ದೆಯಲ್ಲಿಯೇ ದೇವದೂತನು ಹೇಳಿದ್ದನ್ನು ಮಾಡಿ, ಅವನನ್ನು ಹಿಂಬಾಲಿಸಿದನು, ವಚನ 9ರಲ್ಲಿ, ದೂತನ ಹಿಂದೆ ಹೋಗುತ್ತಾ, ದೂತನ ಮೂಲಕ ವಾಗಿ ನಡೆದ ಸಂಗತಿ ನಿಜವಾದದ್ದೆಂದು ತಿಳಿಯದೆ ತಾನು ನೋಡಿದ್ದು ಕನಸು ಎಂದು ನೆನಸಿದನು. "ನಿಮಗೆ ಮೆಚ್ಚುಗೆಯಾಗುವ ಕನಸು ಬೀಳುವಾಗ," ಅದರಿಂದ ಎಚ್ಚರವಾಗದೆ ಇರಲು ಪ್ರಯತ್ನಿಸಿರುವಿರಾ? ನಾನು ನನ್ನ ಚಿಕ್ಕ ವಯಸ್ಸಿನ್ನಲ್ಲಿ, ದಪ್ಪ ವಾಗಿದ್ದರಿಂದ, ಆಕಾಶದಲ್ಲಿ ಯಾವಾಗಲೂ ಹಾರಾಡಲು ಇಚ್ಚಿಸಿದೆನು.[21] ಅದು ಸತ್ಯ ವಾಗದು ಎಂದು ನಾನು ನೆನಸು ವಾಗ, ನಾನು ಅಧೈರ್ಯಗೊಂಡೆನು! ಮರಣವು ಬರುವದೆಂಬ ನಿರೀಕ್ಷೆಯಿಂದ ಪೇತ್ರನು ಮಲಗಿದ್ದನು. ಈಗ ಅವನು ಅರೆ ನಿದ್ದೆಯಲ್ಲಿ ಹೊರಹೋಗುವಾಗ, ಯಾವ ಸಿಪಾಯಿಗಳು ಅವನನ್ನು ನೋಡಲಿಲ್ಲ, ಒಂದು ಉತ್ತಮವಾದ ಗುಣವುಳ್ಳ ಕನಸನ್ನು ಅವನು ಕಂಡಿದ್ದನು. ಅವನ ಯೋಚನೆಯು, "ಇದು ಒಂದು ಉತ್ತಮವಾದ ಕನಸಾಗಿರುವದರಿಂದ! ಅವನು ಎದ್ದೇಳಲು ಮನಸ್ಸು *ಮಾಡದೆ* ಇರಬಹುದು ಎಂದು ಊಹಿಸುತ್ತೇನೆ!"

ಪೇತ್ರ ಮತ್ತು ದೂತ ಇವರಿಬ್ಬರೂ, ಒಂದಾದ ನಂತರ ಇನ್ನೊಂದು ಬಾಗಿಲನ್ನು ದಾಟುತ್ತಿದ್ದರು, "ಅವರು, ಮೊದಲನೆಯ ಮತ್ತು ಎರಡನೆಯ ಕಾವಲುಗಳನ್ನು ದಾಟಿ ಪಟ್ಟಣಕ್ಕೆ ಹೋಗುವ ಕಬ್ಬಿಣದ ಬಾಗಿಲಿಗೆ ಬಂದರು" (ವಚನ 10ಎ). ಆ ಕಬ್ಬಿಣದ ಬಾಗಿಲು ಬಹಳ ದೊಡ್ಡದಾಗಿತ್ತು, ಅದನ್ನು ತೆರೆಯಲು ಬಲವುಳ್ಳ ಮನುಷ್ಯರ ಅಗತ್ಯವಿತ್ತು.[22] ಪೇತ್ರ ಮತ್ತು ದೂತರಿಬ್ಬರೂ ಆ ಬಾಗಿಲಿನ ಬಳಿಗೆ ಬಂದಾಗ, "ಅದು, ತನ್ನಷ್ಟಕ್ಕೆ ತಾನೇ ಅವರಿಗೆ ತೆರೆಯಿತು" (ವಚನ 10ಬಿ). "ತನ್ನಷ್ಟಕ್ಕೆ ತಾನೇ" ಎಂಬ ಗ್ರೀಕ್ ಅನುವಾದವು "ನಿಶಬ್ಧವಾಗಿ" "ಸ್ವಯಂಚಾಲಿತವಾಗಿ" ದೊಡ್ಡ ಬಾಗಿಲು ತೆರೆದುಕೊಂಡಿತು ಎಂದು ನೋಡುತ್ತೇವೆ.

ಪೇತ್ರನ ಬಿಡುಗಡೆಯಲ್ಲಿ, ಸುಮಾರು ಏಳು ವಿಧವಾದ ಅದ್ಭುತಗಳನ್ನು ನಾನು ಕಾಣುತ್ತೇನೆ: (1) ದೂತನು ಕಾಣಿಸಿಕೊಂಡನು, (2) ಸೆರೆಮನೆಯಲ್ಲಿ ಬೆಳಕು ಉಂಟಾಯಿತು, (3) ಸರಪಣಿಗಳು ಕಳಚಿದವು, (4) ಪೇತ್ರನೊಂದಿಗೆ ಬೇಡಿ ಹಾಕಲ್ಪಟ್ಟವರು ಕೂಡ ಎಚ್ಚರಗೊಳ್ಳಲಿಲ್ಲ, (5) ಅವರು ಮೊದಲನೆಯ ಕಾವಲುಗಾರನನ್ನು ದಾಟಿ ಹೋದರು ಕಾವಲುಗಾರನು ಅವರನ್ನು ನೋಡಲಿಲ್ಲ, (6) ಎರಡನೆಯ ಕಾವಲಿನವನು ಕೂಡ ಅವರನ್ನು ಗಮನಿಸಲಿಲ್ಲ, (7) ಹೊರಗಿನ ಬಾಗಿಲು ತನಗೆ ತಾನೇ ತೆಗೆದುಕೊಂಡಿತು, ಈ ಏಳು ಸಂಗತಿಗಳ ಸಂಗಡ ಇತರೆ ವಿಷಯಗಳನ್ನು ಸೇರಿಸಬಹುದು. ಇತರೆ ಬಾಗಿಲುಗಳು ತೆರೆದು ಸಾಮಾನ್ಯವಾದ ಕಾವಲನ್ನು ಅವರು ದಾಟಿದ್ದರು. ಸಂಖ್ಯೆಯು ಪ್ರಮುಖವಲ್ಲ. ದೇವರು ತನ್ನ ಜನರ ಭಿನ್ನಹವನ್ನು ಆಲಿಸಿರುವದು ಪ್ರಮುಖವಾಗಿದೆ - ಅವರ ಊಹೆಗಳ ಮೀರಿ ದೇವರು ಪ್ರತಿಕ್ರಿಯೆ ನೀಡಿದ್ದನು.

ಆ ಬಾಗಿಲು ತೆರೆದ ನಂತರ "ಅವರು ಹೊರಗೆ ಬಂದು ಒಂದು ಬೀದಿಯನ್ನು[23] ದಾಟಿದರು" (ವಚನ 10ಸಿ). "ಅವರು ಸ್ವಲ್ಪ ದೂರ ಹೋದ[24] ನಂತರ, ಆ ದೂತನು ಅವನನ್ನು ಬಿಟ್ಟು ಹೋದನು" (ವಚನ 10ಡಿ). ಆಗ ಪೇತ್ರನು ಎಚ್ಚರವಾದನು, ತಣ್ಣನೆಯ ರಾತ್ರಿಯ ಗಾಳಿಯು ಅವನ ಮುಖದ ಮೇಲೆ ಬೀಸುತ್ತಿತ್ತು, ಅವನ ತಲೆಯ ಮೇಲಿನ ಆಕಾಶದಲ್ಲಿ ನಕ್ಷತ್ರಗಳನ್ನು ಮತ್ತು ಅವನ ಸುತ್ತಲೂ ಇದ್ದ ಮನೆಗಳು ಅವನಿಗೆ ಗೋಚರವಾದವು. "ಅವನು ಎಚ್ಚರಗೊಂಡು" ಆಶ್ಚರ್ಯ ಚಕಿತನಾದನು. "ಕರ್ತನು ತನ್ನ ದೂತನನ್ನು ಕಳುಹಿಸಿ ಹೆರೋದನ ಕೈಯಿಂದಲೂ, ಯೆಹೂದ್ಯ ಜನರು ನನಗೆ ಮಾಡಬೇಕೆಂದಿದ್ದ, ಕೇಡಿನಿಂದಲೂ ನನ್ನನ್ನು

ಬಿಡಿಸಿದನೆಂದು ನನಗೀಗ ತಿಳಿದುಬಂದಿದೆ ಅಂದುಕೊಂಡನು" (ವಚನ 11).

ಏಕೆ ದೂತನು ಆ ಸನ್ನಿವೇಶದಿಂದ ಹೊರಟು ಹೋದನು? ಯಾಕೆಂದರೆ, ಕೆಲವು ಸಾರಿ ನಾವೇ ಮಾಡಿಕೊಳ್ಳಬೇಕಾದ ಸಂಗತಿಯನ್ನು ದೇವರು ಮಾಡುವದಿಲ್ಲ. ಪೇತ್ರನು ಈಗ ಸ್ವತಂತ್ರನಾಗಿದ್ದನು. ಅವನು ಒಂದು ಕ್ರಿಯೆಯ ಯೋಜನೆಯನ್ನು ಸಿದ್ಧಪಡಿಸಿದನು. ಅವನ ಸೆರೆಮನೆಯ ಬಿಡುಗಡೆಯನ್ನು ಕುರಿತು ಮೊದಲಿಗೆ ಸಹೋದರರಿಗೆ ತಿಳಿಸುವದಕ್ಕಿದ್ದನು, ನಂತರ ಅವನು ಒಂದು ರಹಸ್ಯ ಸ್ಥಳವನ್ನು ಕಂಡುಕೊಳ್ಳಬೇಕಿತ್ತು.[25]

"ತರುವಾಯ ಅವನು ಯೋಚನೆ ಮಾಡಿಕೊಂಡು, [ತಾನು ನಿಜವಾಗಿಯೂ ದೇವರಿಂದಾಗಿ ಬಿಡುಗಡೆ ಹೊಂದಿದೆನೆಂದು] ಮಾರ್ಕನೆನಿಸಿಕೊಳ್ಳುವ ಯೋಹಾನನ ತಾಯಿಯಾದ ಮರಿಯಳ[26] ಮನೆಗೆ ಬಂದನು" (ವಚನ 12ಎ). ಆ ಮನೆಯಲ್ಲಿ ಪೇತ್ರನು ಹೆಚ್ಚು ಸಮಯವನ್ನು ಕಳೆದನು.[27] ಅದು ಮದ್ಯರಾತ್ರಿಯಾಗಿದ್ದರೂ, ಅಲ್ಲಿ ಕೆಲವು ಕ್ರೈಸ್ತರನ್ನು ಕಂಡು ಕೊಳ್ಳಬಹುದೆಂಬ ನಿರೀಕ್ಷೆಯಲ್ಲಿದ್ದನು. (ಅವನು ಸರಿಯಾದ ಯೋಚನೆಯನ್ನೇ ಮಾಡಿದ್ದನು. "ಅಲ್ಲಿ ಅನೇಕರು ಕೂಡಿ ಬಂದು ಪ್ರಾರ್ಥನೆ ಮಾಡುತ್ತಿದ್ದರು" [ವಚನ 12ಬಿ].) ಮಾರ್ಕನ ಎನ್ನುವ ಯೌವನಸ್ಥನ ಪರಿಚಯವನ್ನು ಗಮನಿಸಿರಿ. ಪೇತ್ರನು ಅವನನ್ನು ಪರಿವರ್ತಿಸಿರಬಹುದು, ನಂತರ ಅವನನ್ನು ಆತ್ಮೀಕ "ಮಗನು" ಎಂದು ಹೇಳಿರುವನು (1 ಪೇತ್ರ 5:13).

ಪೇತ್ರನು ಯೆರೂಸಲೇಮಿನ ಕತ್ತಲೆಯ ರಸ್ತೆಯಲ್ಲಿ ವೇಗವಾಗಿ ನಡೆಯುವಾಗಲೂ ಅಪಾಯವು ಇತ್ತು. ಕೊನೆಗೆ ಅವನು ಮರಿಯಳ ಮನೆಗೆ ಸೇರಿದನು. "ಪೇತ್ರನು ಬಾಗಿಲಿನ ಕದವನ್ನು ತಟ್ಟಲು[29] ರೋದೆ ಎಂಬ ಒಬ್ಬ[30] ಚಾಕರಿಯವಳು[31] ನೋಡುವದಕ್ಕೆ ಬಂದಳು" (ವಚನ 13). "ಸಭೆಯ ಜನರನ್ನು ಹಿಂಸಿಸಲು" ಹೆರೋದನು ತನ್ನ ಕೈ ಎತ್ತಿರಲು (ವಚನ 1), ಬಾಗಿಲನ್ನು ತಟ್ಟುವ ಮೂಲಕ, ಅದರೊಳಗಿದ್ದ ಜನರನ್ನು ಬಂಧಿಸಲು ರೋಮಾ ಸಿಪಾಯಿಗಳು ಬಂದಿರಬಹುದೆಂಬ ಶಂಕೆವುಂಟಾಯಿತು. ರೋದಯು ಬಹುಶಃ ಬಾಗಿಲಿನ ಸಂದಿನಂದ ನೋಡಿರಬಹುದು, ಮತ್ತು ಯಾರದು ಎಂದು ಪಿಸುಗುಟ್ಟಿರಬಹುದು? ಪೇತ್ರನ ಗಾಬರಿಯಾದ ಸ್ವರವನ್ನು ಆಲಿಸಲು: "ನಾನು ಪೇತ್ರನು, ಬೇಗನೆ ಒಳಪ್ರವೇಶಿಸಲು ಅನುಮತಿಸು ಎಂದು ಹೇಳಿರಬಹುದು!"

ಆದಿ ಸಭೆಯವರು ನಮ್ಮ ಹಾಗೆ ಇದ್ದದ್ದರಿಂದ ಅವರ ತಮಾಷೆಯ ಸಂಗತಿಯನ್ನು ಲೂಕನು ಪುನಃ ಬರೆದಿರುವನು. "[ರೋದಯು] ಅವನ ಸ್ವರವನ್ನು ಕೇಳಿ, ಅವನು ಪೇತ್ರನೇ ಎಂದು ತಿಳಿದ ಆನಂದದಿಂದ,[32] ಬಾಗಿಲನ್ನು ತೆರೆಯಲಿಲ್ಲ" (ವಚನ 14ಎ). ಅಪೊಸ್ತಲನನ್ನು ಹೊರಗಡೆ ನಿಲ್ಲಿಸಿ, ಆಕೆಯು ಒಳಗೆ ಓಡಿ ಹೋಗಿ, "ಪೇತ್ರನು ಬಾಗಿಲಿನ ಬಳಿಯಲ್ಲಿ ನಿಂತಿರುವನು ಎಂದು ತಿಳಿಸಿದಳು" (ವಚನ 14ಬಿ). ಪ್ರಾರ್ಥನೆಯ ಮನೆಗೆ ಹೋಗು ವದಕ್ಕಿಂತಲೂ, ಪೇತ್ರನಿಗೆ ಸೆರೆಮನೆಯಿಂದ ಬಿಡಿಸಿಕೊಳ್ಳುವದು ಸರಳವಾಗಿತ್ತು!

ದೇವರು ಅವರ ಪ್ರಾರ್ಥನೆಗೆ ನೀಡಿದ ಸದುತ್ತರದ ಕುರಿತು ಮರಿಯಳ ಮನೆಯಲ್ಲಿದ್ದವರಿಗೆ ಉಂಟಾದ ಭಾವನೆ ಏನಾಗಿತ್ತು? ನಾನು ಈಗಾಗಲೇ ತಿಳಿಸಿರುವಂತೆ, ಅವರು ಯಾವ ವಿಷಯಕ್ಕಾಗಿ ಪ್ರಾರ್ಥಿಸಬೇಕೆಂಬ ಗೊಂದಲಕ್ಕೊಳ ಗಾಗಿದ್ದರು. ಪೇತ್ರನ ಬಿಡುಗೆಯ ಹೊರತಾಗಿ ಅವರು ಪ್ರಾರ್ಥಿಸಿದ್ದರೆ, ಅವರು ಪ್ರಾರ್ಥನೆ ಮಾಡಿದ ವಿಷಯಕ್ಕಿಂತಲೂ, ಹೆಚ್ಚಾದದ್ದನ್ನೆ ಕುರಿತು ನೀಡಿದ್ದನು. ಈ ಕುರಿತ ಅವರ ದೃಷ್ಟಿಕೋನವು ಏನೇ ಇರಲಿ, ದೇವರು ಅವರ ಪ್ರಾರ್ಥನೆಗೆ ಅದ್ಭುತವಾದ ಉತ್ತರವನ್ನು ನೀಡಿದ್ದನು! ಅವರ ಪ್ರತಿಕ್ರಿಯೆಯ ಕುರಿತು ವಚನ 15ರಲ್ಲಿ: "ಅವರು ಅವಳಿಗೆ - ನಿನಗೆ ಹುಚ್ಚು ಹಿಡಿದದೆ ಎಂದು ಹೇಳಿದರು!" ನಾನು (ತಮಾಷೆಗಾಗಿ) ಯಾವಾಗಲೂ ಹೇಳುವಂತೆ, ನಾನು ನನ್ನ ಸಹೋದರರನ್ನು ಈ ರೀತಿ ಯಾಗಿಯೇ ಅರ್ಥಮಾಡಿಕೊಳ್ಳಬೇಕಿತ್ತು: ಅವರು ದೇವರಿಗೆ ಪ್ರಾರ್ಥನೆ ಮಾಡಿದರು, ಆದರೆ ಅದಕ್ಕೆ ಉತ್ತರ ದೊರೆಯುವಾಗ ಆಶ್ಚರ್ಯಗೊಂಡರು!

ಅವರ ಪ್ರತಿಕ್ರಿಯೆಯು (ನಮ್ಮ ಕುರಿತು), ನನಗೆ ಒಂದು ಹಳೆಯ ಕಥೆಯನ್ನು

ನೆನಪು ಮಾಡುತ್ತೆ. ಪಟ್ಟಣದಲ್ಲಿ ಒಬ್ಬ ಮನುಷ್ಯನು ಒಂದು ಚಿಕ್ಕ ಹೋಟೆಲನ್ನು ತೆಗೆಯಲು ಅನುಮತಿಯನ್ನು ಪಡೆದನು. ಸ್ಥಳೀಯ ಸಭೆಯವರು ಆ ವಿಧವಾದ ಅಂದರೆ ಕುಡಿಯುವ ಹೋಟೆಲ್ ಆಗಬಾರದೆಂದು ದೇವರಲ್ಲಿ ಪ್ರಾರ್ಥಿಸಿದರು. ಆ ಹೋಟೆಲ್‌ನ್ನು ತೆಗೆಯುವ ಮೊದಲ ಕೆಲವು ದಿವಸಗಳಲ್ಲಿ, ಸಿಡಿಲು ಹೊಡೆದು, ಆ ಕಟ್ಟಡವು ಸುಟ್ಟು ಹೋಯಿತು. ಅಲ್ಲಿದ್ದ ಸಭೆಯವರಿಗೆ ಆಶ್ಚರ್ಯವಾದರೂ ಅದನ್ನು ಮೆಚ್ಚಿಕೊಂಡರು - ಆದರೆ ಆ ಕಟ್ಟಡದ ಯಜಮಾನನು ಇವರ ವಿರುದ್ಧ ನ್ಯಾಯಲಯಕ್ಕೆ ದಾವೆ ಹೂಡಿದ್ದನು. ಅವರ ಪ್ರಾರ್ಥನೆಯ ಕಾರಣದಿಂದ ಅವನಿಗೆ ನಷ್ಟವುಂಟಾಯಿತು ಎಂದು ತಿಳಿಸಿದ್ದನು. ಆದರೆ ಅವರು ಆ ವಾದ ವನ್ನು ನಿರಾಕರಿಸಿದರು. ಪ್ರಿಲಿ ಎಂಬ ನ್ಯಾಯಧೀಶರು ಈ ದಾವೆಯ ಕುರಿತು, ಈ ಹಿನ್ನೆಲೆಯಲ್ಲಿ ನನ್ನ ನಿರ್ಣಯವೇನು ಎಂದು ನಾನು ಅರಿತಿರುವದಿಲ್ಲ, ಆದರೆ "ಹೋಟೆಲಿನ ಮಾಲಿಕನು ಪ್ರಾರ್ಥನೆಯ ಬಲವನ್ನು ನಂಬಿದ್ದನು, ಆದರೆ ಈ ಸಭೆಯ ಜನರು ನಂಬಿರಲಿಲ್ಲ" ಎಂಬ ನಿರ್ಣಯವನ್ನು ನೀಡಿದ್ದರು.

ಆ ಮನೆಯಲ್ಲಿದ್ದವರ ಶಂಕೆಯ ಬಗ್ಗೆ ರೋದಳು ಅಧೈರ್ಯಗೊಳ್ಳಲಿಲ್ಲ. "ಆಕೆಯು ತಾನು ಹೇಳಿದಂತೆಯೇ ಇದೆ ನಿಜವಾಗಿಯು ಪೇತ್ರನು ಬಾಗಿಲಿನ ಹೊರಗೆ ಇದ್ದಾನೆ" (ವಚನ 15ಎ). ಎಂದು ದೃಢವಾಗಿ ಹೇಳುವಾಗ ಅವರು ಆ ಬಾಗಿಲಿನ ಬಳಿ ಯಾರೋ ಒಬ್ಬರು ಇರುವರೆಂದು ನಿರ್ಣಯಿಸಿದರು - ಮತ್ತು "ಅದು ಅವನ ದೂತನಾಗಿರಬಹುದು ಅಂದರು" (15ಬಿ)![33] ಒಬ್ಬ ದೂತನು ಏಕೆ ಬಾಗಿಲನ್ನು ತಟ್ಟಬೇಕಾಯಿತು? J. W. ಮೆಕ್ ಗಾರ್ವೆಯವರು, ಅವರ ಆಶ್ಚರ್ಯವಾದ ಮಾತುಗಳ ಬಗ್ಗೆ ಬರೆದು:

> ಅವನನ್ನು ಕಾಣುವ ಮೊದಲು, ಅದು ಅವನ ದೂತನೆಂದು ಯೋಚಿಸಿದ್ದರು, ಪ್ರತಿಯೊಬ್ಬನು ಒಬ್ಬ ದೇವದೂತನನ್ನು ಹೊಂದಿರುವನೆಂಬ ತತ್ವದ ಮೇಲೆ ಅದು ಅವಲಂಭನೆಗೊಂಡಿತ್ತು, ಅದು ವಾಕ್ಯದ ಅಂಶವೇ [ಮತ್ತಾಯ 18:10; ಇಬ್ರಿಯ 1:14] ಮತ್ತು ಆ ದೇವದೂತನು, ಅವರಿಗೆ ಒಳಪಟ್ಟಿರುವವನ ಸ್ವರವನ್ನು ಹಾಗೂ ಆಕಾರವನ್ನು ನೀಡಲು ಸಾಧ್ಯವಿತ್ತು, ಎಂಬುದು ಮೂಡನಂಬಿಕೆಯಾಗಿದೆ.[34]

ಪೇತ್ರನನ್ನು ಹೊರತರಲು ಸಭೆಯು ಒಂದು ಗಟ್ಟಿಮುಟ್ಟಾದ ವಿಶೇಷ ಯೋಜನೆಯನ್ನು ಮಾಡಿತ್ತು ಎಂದು ನಿರ್ಣಯಿಸಬಹುದೇ? ಅವನು ಸೆರೆಮನೆಯಿಂದ ಹೊರ ಬರುವದು ಅಸಾಧ್ಯ ವಾಗಿತ್ತು ಎಂದು ಅವರು ನಂಬಿದ್ದರು. ಅದು ನೆರವೇರುವಾಗ ಅವರು ಅದನ್ನು ಸಹ ನಂಬದವರಾದರು!

ಅಷ್ಟರಲ್ಲಿ ಪೇತ್ರನು "ಇನ್ನು ತಟ್ಟುತ್ತಾ ಇರಲು" (ವಚನ 16ಎ). ಕೊನೆಯದಾಗಿ, ಒಳಗಿದ್ದವರು ಅವನ ಸ್ವರವನ್ನು ಕೇಳಿದರು (ಇಷ್ಟರಲ್ಲಿ ಪೇತ್ರನು ಬಾಗಿಲನ್ನು ಇನ್ನೂ ವೇಗವಾಗಿ ತಟ್ಟುತ್ತಿರಬಹುದು) ಮತ್ತು ಅವನನ್ನು ನೋಡಲು ಬಾಗಿಲಿನ ಬಳಿ ಬಂದರು. ಮತ್ತು ಬಾಗಿಲನ್ನು ತೆರೆದು ಅವನನ್ನು ಕಂಡು ಬೆರಗಾದರು (ವಚನ 16ಬಿ). ಅಲ್ಲಿರುವ "ಅವರು" ಎಂಬ ಬಹು ಪದವನ್ನು ಪ್ರಯೋಗಿಸಲಾಗಿದೆ. ಅವರ ಸಂಭಾಷಣೆಯನ್ನು ಗಮನಿಸಿ: "ನೀನು ಹೋಗಿ ನೋಡು"; ಇಲ್ಲ "*ನೀನೇ* ಹೋಗು" ನಂತರ, ಅವರು ಒಟ್ಟಾಗಿ ಹೋಗಲು ನಿರ್ಧರಿಸಿದರು ಅವರು ಒಂದಾಗಿ ಸೇರಿ ಭಯದಿಂದ ಮುಂದಾದರು, ನಂತರ ಬಾಗಿಲನ್ನು ತೆರೆದರು, ಅವರು "ಪೇತ್ರನೇ" ಎಂದು ತಿಳಿದ ನಂತರ "ಆಶ್ಚರ್ಯಗೊಂಡರು"!

ಅವರು ಬೆರಗಾಗಿರುವಾಗ "ಸುಮ್ಮಗಿರಿ ಎಂದು ಕೈ ಸನ್ನೆ ಮಾಡಿದರು"[35] (ವಚನ 17ಎ). ಅಲ್ಲಿ ಈಗಾಗಲೇ ಬಹಳ ಗದ್ದಲವಾಗಿತ್ತು. ಪೇತ್ರನು ತಪ್ಪಿಸಿಕೊಂಡು ಬಂದನು ಎಂಬ ವಿಚಾರವನ್ನು ಅವರ ನೆರೆಹೊರೆಯ ಯೆಹೂದ್ಯರು ತಿಳಿಯಬಾರದಿತ್ತು. ಪೇತ್ರನು ನಂತರ ವಿವರಿಸಿ, "ತನ್ನನ್ನು ಕರ್ತನು ಸೆರೆಮನೆಯೊಳಗಿಂದ ಹೊರಗೆ ಕರೆದು ಕೊಂಡು ಬಂದ ರೀತಿ ಯನ್ನು ವಿವರಿಸಿದನು" (ವಚನ 17ಬಿ). ಪೇತ್ರನು ಈ ಅದ್ಭುತವಾದ ಸಾಕ್ಷಿಯನ್ನು ನೀಡಿದ್ದನು

ಎಂದು ಅವರ ವಿರೋಧಿಗಳು ಸಹ ಅರಿಯಬೇಕು.

ಈ ಸಂಗತಿಯನ್ನು "ಯಾಕೋಬನಿಗೂ, ಸಹೋದರರೆಲ್ಲರಿಗೂ" ತಿಳಿಸ ಬೇಕೆಂದು ಹೇಳಿದನು[36] (ವಚನ 17ಸಿ). ಈ ಯಾಕೋಬನು (ಕೊಲ್ಲಲ್ಪಟ್ಟ ಅಪೊಸ್ತಲನಾಗಿರಲಿಲ್ಲ), ಆದರೆ ಅವನು ಕರ್ತನ ಸಹೋದರನಾಗಿದ್ದನು,[37] ಅವನು ಯೆರೂಸಲೇಮಿನ[38] ಸಭೆಯ ನಾಯಕನಾಗಿದ್ದನು. ಅವನು ಮತ್ತು ಅವನ ಜೊತೆಗಾರರು, ಬಹುಶಃ ಪಟ್ಟಣದ ಇತರೆ ಸ್ಥಳದಲ್ಲಿ ಪ್ರಾರ್ಥಿಸುತ್ತಿರಬಹುದು. ಪೇತ್ರನು ಯಾವುದೇ ಅಪೊಸ್ತಲನ ಕುರಿತು ಹೇಳದೆ ಇರುವದರಿಂದ, ಅಪೊಸ್ತಲರಾರು ಯೆರೂಸಲೇಮಿನಲ್ಲಿ ಇರಲಿಲ್ಲ ಎಂಬ ಸೂಚನೆ ನೀಡಿರುವನು. ಪ್ರಾಯಶಃ ಹಿಂಸೆಯ ಸಮಯದಲ್ಲಿ ಚದರಿದವರಾಗಿ, ಪ್ರಸಂಗಿಸುತ್ತಿರಬಹುದು, ಅಥವಾ ಹಿಂಸೆಯ ಸಂದರ್ಭದಲ್ಲಿ ಅಡಗಿಕೊಂಡಿರಬಹುದು.

ಮರಿಯಳ ಮನೆಗೆ ಹೋಗುವದರ ಮೂಲಕ ಪೇತ್ರನು ತನ್ನ ಗುರಿಯನ್ನು ಸಾಧಿಸಿದ ನಂತರ, "ಬೇರೆ ಸ್ಥಳಕ್ಕೆ ಹೊರಟು ಹೋದನು" (ವಚನ 17ಡಿ). ಮರಿಯಳ ಮನೆಯು, "ಕ್ರೈಸ್ತರೆಲ್ಲರೂ ಒಟ್ಟುಗೂಡುವ ಪ್ರಸಿದ್ಧ ಸ್ಥಳವಾದ್ದರಿಂದ, ಪೇತ್ರನನ್ನು ಹುಡುಕಲು ಸಿಪಾಯಿಗಳಿಗೆ ಅದು ತಕ್ಕ ಸ್ಥಳವಾಗಿತ್ತು. ಆದ್ದರಿಂದ ಅವನು ಬೇರೆ ಸ್ಥಳಕ್ಕೆ ಹೋಗುವದು ಅನಿವಾರ್ಯವಾಗಿತ್ತು." ಆ ಸ್ಥಳದ[39] ಕುರಿತು ಅನೇಕ ಊಹೆಗಳನ್ನು ಮಾಡಲಾಗಿದೆ. ಅದನ್ನು ಲೂಕನು ತಿಳಿಸದೆ ಇರುವದರಿಂದ, ಊಹೆ ಮಾಡುವದು ವ್ಯರ್ಥ. ಲೂಕನಿಗೆ ಒಂದು ವೇಳೆ ತಿಳಿದಿದ್ದರೂ, ಅದನ್ನು ಅವನು ದಾಖಲು ಮಾಡಿರುವದಿಲ್ಲ,

ಏಕೆಂದರೆ ಮತ್ತೊಂದು ಹಿಂಸೆಯ ಸಮಯವುಂಟಾಗುವ ಸಂಬವ ಇದ್ದದ್ದರಿಂದ ಲೂಕನು ಅದನ್ನು ದಾಖಲಿಸಿರುವದಿಲ್ಲ.[40] ಈ ಮುಂದಿನ ಅಂಶದಿಂದ, ಲೂಕನು ಸೌಲನೇ ಪೌಲನ ಕುರಿತು ಗಮನ ಹರಿಸಿರುವನು.

ವಚನ 18 ರಿಂದ 24ರ ವರೆಗೆ ಪೇತ್ರನ ಬಿಡುಗಡೆಯ ಕುರಿತು ಬರೆಯಲಾಗಿದೆ. ವಚನ 18ರಲ್ಲಿ "ಬೆಳಗಾದ ಮೇಲೆ ಪೇತ್ರನು ಏನಾದನೆಂದು ಸಿಪಾಯಿಗಳಲ್ಲಿ ಬಳಹ ಕಳವಳವುಂಟಾಯಿತು." ಲೂಕನ ಪದಗಳು ಶಾಸ್ತ್ರೀಯ ವ್ಯಾಖ್ಯಾನವಾಗಿದೆ. ಪೇತ್ರನೊಂದಿಗೆ ಕಟ್ಟಲ್ಪಟ್ಟಿದ ಸಿಪಾಯಿಗಳು ಎದ್ದು ಪೇತ್ರನನ್ನು ಕಾಣದಾದಗ, ಅವರಲ್ಲಿ ಉಂಟಾದ ಅಪನಂಬಿಕೆಯನ್ನು ಊಹಿಸಿರಿ? ಅವರು ಪರಸ್ಪರ ಬೆರಳುಗಳನ್ನು ತೋರಿಸುತ್ತಾ "ನೀನು ಮಲಗಿದ್ದಿರಬಹುದು" ಎಂದು ಹೇಳಿಕೊಂಡಿರಬಹುದು; ಅಥವಾ "ನೀನೇ ಅವನಿಗೆ ಜಾರಿಕೊಳ್ಳಲು ಸಹಾಯ ಮಾಡಿರಬಹುದು ಎಂದು ಹೇಳುತ್ತಿದ್ದರು." ವಚನ 19ರಲ್ಲಿ ಪೇತ್ರನು ತಪ್ಪಿಸಿಕೊಂಡ ವರ್ತಮಾನವನ್ನು ಹೆರೋದನು ಕೇಳಿ, ಅವನು ಎಲ್ಲಾ ಸಿಪಾಯಿಗಳನ್ನು ಕೊಂದುಹಾಕಿದನು. ಯಾವ ಸಿಪಾಯಿಗೂ ಲಂಚ ನೀಡಲಾಗಲಿಲ್ಲ - ಒಬ್ಬ ಖೈದಿಯನ್ನು ತಪ್ಪಿಸಿಕೊಳ್ಳಲು ಬಿಟ್ಟ ಕಾರಣದ ನಿಮಿತ್ತ ಅವರಿಗ ಶಿಕ್ಷೆಯುಂಟಾಯಿತು.

ಮುಂದಿನ ಪಾಠದಲ್ಲಿ ಉಳಿದಿರುವ ಕಥೆಯನ್ನು ಮುಂದುವರಿಸೋಣ. ಅಂತ್ಯಗೊಳಿಸುವ ಮುನ್ನ ವಚನ 24ನ್ನು ಗಮನಿಸುವದಾದರೆ, ಅದು ಪೇತ್ರನ ಬಿಡುಗಡೆಯ ಕಥೆಗೆ ಮುಖ್ಯ ತಾತ್ಪರ್ಯವಾಗಿದೆ: "ಆದರೆ ದೇವರ ವಾಕ್ಯವು ಹಬ್ಬಿ ಹೆಚ್ಚುತ್ತಾ ಬಂತು" ವಾಕ್ಯವು ಹಬ್ಬಿ ಹೆಚ್ಚುತ್ತಾ ಬಂದಾಗ, ವಾಕ್ಯಕ್ಕೆ ಹೆಚ್ಚಾದ ಪ್ರತಿಕ್ರಿಯೆ ಉಂಟಾಯಿತು. ಸಭೆಯನ್ನು ನಾಶಪಡಿಸುವ ಸೈತಾನನ ತಂತ್ರಕ್ಕೆ ಇನ್ನೊಂದು ಸಾರಿ ಹಿನ್ನಡೆ ಉಂಟಾಯಿತು: ಕ್ರೈಸ್ತರ ಸ್ವರವನ್ನು ಮೌನ ಮಾಡುವ ಬದಲು, ಅದು ಇನ್ನೂ ಭಲಗೊಂಡಿತು. ಸಭೆಯು ಧೈರ್ಯದಲ್ಲಿ ವೃದ್ಧಿಗೊಂಡು ಸಂಖ್ಯೆಯಲ್ಲಿ ಹೆಚ್ಚಾಗ ತೊಡಗಿತ್ತು. ನಾವು ಪ್ರಾರ್ಥನೆ ಮಾಡಬೇಕಾಗಿರುವದನ್ನೆ ಮಾಡಿದರೆ. ನಾವುಗಳು ಸಹ ನಮ್ಮ ಅಭಿಲಾಷೆಗಳಲ್ಲಿ ವೃದ್ಧಿ ಹೊಂದುವೆವು.

## ಮುಕ್ತಾಯ

ನೀವು ಮಾಡಬೇಕಾದ ವಿಷಯವನ್ನು ಮಾಡಲಾರದಾಗ, ಪ್ರಾರ್ಥಿಸುವುದೊಂದೇ


ಮಾರ್ಗ ಎಂದು ನಾನು ಈ ಪಾಠದಲ್ಲಿ ತಿಳಿಸಿರುವೆನು. ಮೊಣಕಾಲೂರಿರಿ, ದೇವರ ಮುಂದೆ ಹೃದಯವನ್ನು ಬಿಚ್ಚಿಡಿರಿ, ವಿಷಯಗಳನ್ನು ಆತನ ಸಾಧ್ಯತೆವುಳ್ಳ ಹಸ್ತದಲ್ಲಿಡಿರಿ. ಪ್ರಾರ್ಥನೆಯು ಅಸಾಧ್ಯವಾದ ಸಂಗತಿಗಳಿಗೆ ಮಾತ್ರ ಮೀಸಲು ಎಂದು ನಾನು ಸಲಹೆ ನೀಡುತ್ತಿರುವದಿಲ್ಲ. ಸಾಮರ್ಥ್ಯಗಳು ಮೀರಿದ ನಂತರ ಪ್ರಾರ್ಥಿಸಬೇಕು. ನೀವು ಯಾವುದೇ ಸವಾಲನ್ನು ಎದುರಿಸುವಾಗ, ನೀವು ಪ್ರಾರ್ಥನೆಯಲ್ಲಿ ಆರಂಭಿಸಿ, ಪ್ರಾರ್ಥನೆಯಲ್ಲಿ ಮುಂದುವರಿಯಿರಿ, ಅದನ್ನು ಪ್ರಾರ್ಥನೆಯಲ್ಲಿ ಆರಂಭಿಸಿ, ಅಂತ್ಯಗೊಳಿಸಿ. ಆದಿ ಸಭೆಯು ಪ್ರಾರ್ಥನೆಯ ವಾತವರಣದಲ್ಲಿ ನೆಲೆಸಿತ್ತು; ನಮ್ಮ ಸ್ವಂತ ಜೀವಿತವು ಸಹ ಪ್ರಾರ್ಥನೆಯಲ್ಲಿ ಮುಳುಗಿರಬೇಕು.

ಅಪೊಸ್ತಲರ ಕೃತ್ಯಗಳು 12ರಲ್ಲಿ ಪ್ರಾರ್ಥನೆಯ ಕುರಿತು ಅಂತಿಮವಾದ ಪಾಠವಿದೆ, ನಾವು ಅದನ್ನು ಕಳಕೊಳ್ಳಬಾರದು - ದೇವರು ನೀಡುವ ಯಾವುದೇ ಉತ್ತರವಾದರೂ ಸರಿಯೇ ಅದರಲ್ಲಿ ಸಂತೃಪ್ತರಾಗಬೇಕು, ಯಾಕೆಂದರೆ ದೇವರು ಉತ್ತಮವಾದದ್ದನ್ನು ಅರಿತಿರುವನು. ಯಾಕೋಬನನ್ನು ಹೊರತು ಪಡಿಸಿ ಪೇತ್ರನನ್ನು ಮಾತ್ರ ದೇವರು ಏಕೆ ಕಾಪಾಡಿದನು? ಎಂಬ ದೊಡ್ಡ ಪ್ರಶ್ನೆಗಳನ್ನು ಜನರು ಹೊಂದಿರುವದಾದರೆ ಯಾಕೋಬನ *ಮರಣದಲ್ಲಿ* ದೇವರು ವಿಶೇಷ ವಾದ ಸದುದ್ದೇಶವನ್ನು[41] ಹೊಂದಿದ್ದನು. ಪೇತ್ರನ ಬಿಡುಗಡೆಯಲ್ಲಿ ಇನ್ನು ಒಳ್ಳೆಯ ಹಾಗು ಹೆಚ್ಚಿನ ಕಾರ್ಯಗಳು ಉಂಟಾಗುವ ಸಂಭವವಿತ್ತು. ಇದು ಸರಿಯಾದ ಉತ್ತರವಾಗಿದೆ, ಆದರೆ ನಾನು ಇನ್ನೊಂದು ಆಲೋಚನೆಯನ್ನು ನೀಡುವೆನು: ಒಂದು ವೇಳೆ ನಾವುಗಳು ತಪ್ಪಾದ ಪ್ರಶ್ನೆಯನ್ನು ಕೇಳು ತ್ತಿರಬಹುದು. ಸಾಧ್ಯವಾದರೆ, "ಯಾಕೋಬನು ಕರ್ತನ ಬಳಿಗೆ ಹೋಗುವ ಪ್ರಥಮ ಅಪೊಸ್ತಲನು ಏಕೆ ಆದನು" ಎಂಬ ಪ್ರಶ್ನೆಯನ್ನು ಕೇಳಬೇಕು, "ಆದರೆ ಪೇತ್ರನು ಇನ್ನೂ ಅನೇಕ ವರ್ಷಗಳ ಕಾಲ ಭೂಲೋಕದಲ್ಲಿದ್ದನು" ಎಂದು ಕೇಳಿಕೊಳ್ಳಬೇಕು? ನಮ್ಮ ಪ್ರಶ್ನೆಗಳಿಂದಲೇ, ನಾವು ದೇವರ ಕಾರ್ಯಗಳನ್ನು ಗಮನಿಸಿರುವದಿಲ್ಲವೆಂಬ ಪುರಾವೆ ಉಂಟಾಗುತ್ತದೆ. ಕೀರ್ತನೆಗಾರನು ಬರೆದು *"ಯೆಹೋವನು ತನ್ನ ಭಕ್ತರ ಮರಣವನ್ನು ಅಲ್ಪವೆಂದು ಎಣಿಸುವದಿಲ್ಲ"* ಎಂದಿರುವನು (ಕೀರ್ತನೆಗಳು 116:15; ಒತ್ತಿ ಹೇಳಿದ್ದು ನನ್ನದು). ಅನೇಕ ಕೂಲಿಕಾರರು, ಅರಮನೆಯ ಅವರಣದಲ್ಲಿರುವ ಬಿಸಿಲಿನಲ್ಲಿ ಕೆಲಸ ಮಾಡುತ್ತಿರುವದನ್ನು ಊಹಿಸಿಕೊಳ್ಳಿರಿ: ಆಗಾಗ್ಗೆ ಒಬ್ಬನು ಮಾತ್ರ ಪ್ರವೇಶವಾಗುವಂತೆ ಅರಮನೆಯ ಬಾಗಿಲನ್ನು ತೆರೆಯಲಾಗುವದು. ಅರಮನೆಯ ಒಳಕ್ಕೆ ಪ್ರವೇಶಮಾಡಿದವನ ಕುರಿತು ಜನರು ದುಃಖಿಸದೆ, ಅವರುಗಳು ಅರಮನೆಯ ಹೊರಗಡೆ ಇರುವದಕ್ಕಾಗಿ ದುಃಖಿಸುವರು. ಅಲ್ಲಿರುವ ಪ್ರತಿಯೊಬ್ಬರು, ಪ್ರವೇಶಿಸುವ ವ್ಯಕ್ತಿ *ನಾನೇ* ಏಕೆ ಆಗಬಾರದು? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳುವರು. ಅದೇ ರೀತಿಯಲ್ಲಿ ದೇವರು (ಯಾಕೋಬನ ಪ್ರಾರ್ಥನೆಗೆ "ಇಲ್ಲವೆಂದು" ಹೇಳಿ) ನಮ್ಮ ಪ್ರಾರ್ಥನೆಗೆ "ಇಲ್ಲವೆಂದು" ಹೇಳಿ ಅಥವಾ (ಪೇತ್ರನಿಗೆ ಹೌದು ಎಂದು ಹೇಳಿದ ಹಾಗೆ) ನಮಗೆ ಹೌದು ಎಂದು ಹೇಳುವದಾದರೆ, ಅದರಲ್ಲಿರುವ ಪ್ರತ್ಯುತ್ತರವು ಸರಿಯೇ, ಗ್ರಹಿಸಿದರೂ ಅಥವಾ ಅದನ್ನು ಗ್ರಹಿಸದೇ ಇದ್ದರೂ ಆತನ ಉತ್ತರ ಸರಿಯಾಗಿಯೇ ಇರುತ್ತದೆ.


ಕರ್ತನಲ್ಲಿ ಭರವಸವುಳ್ಳವರಾಗಿ "ಎಡಬಿಡದೆ ಪ್ರಾರ್ಥಿಸೋಣ" (1 ಥೆಸಲೊನೀಕದವರಿಗೆ 5:17).[42]

## ದೃಶ್ಯ ಸಂಬಂಧವಾದ - ಟಿಪ್ಪಣಿ


ಈ ಪಾಠದ ಪ್ರಾಯೋಜನೆಗಾಗಿ, ಕಪ್ಪು ಹಲಗೆಯ ಮೇಲೆ ಒಂದು ಚಿತ್ರವನ್ನು ಬರೆಯುತ್ತೇನೆ. ಮೊದಲನೆಯದಾಗಿ, ಒಂದು ಸೆರಮನೆಯ ಚಿತ್ರವನ್ನು ಬರೆದು ಮನುಷ್ಯ ಬಲದಿಂದ ತಪ್ಪಿಸಿಕೊಳ್ಳಲಾರದ, ಮತ್ತು ಪೇತ್ರನಿಗೂ ಅವನ ಸ್ವತಂತ್ರಕ್ಕೂ ನಡುವೆ ಒಂದು ಅಡಚಣೆಯನ್ನು ತೋರಿಸುತ್ತೇನೆ.




ನಂತರ, ಮರಿಯಳ ಮನೆಯ ಚಿತ್ರವನ್ನು ಬಿಡಿಸುತ್ತೇನೆ, ಅಲ್ಲಿ ಕ್ರೈಸ್ತರೆಲ್ಲರೂ ಒಟ್ಟಾಗಿ ಸೇರಿ, ಪೇತ್ರನನ್ನು ಬಿಡಿಸುವ ಯೋಜನೆಯ ಚಿತ್ರವನ್ನು ತೋರಿಸುತ್ತೇನೆ. (ಒಗ್ಗೂಡಿ ಸೆರಮನೆಯನ್ನು ಅತಿಕ್ರಮಣ ಮಾಡುವ ಚಿತ್ತವಿರಬಹುದು.)



ಅಂತಿಮವಾಗಿ, ಗ್ರಹಿಕೆ (1) ಕ್ರೈಸ್ತರು ಪ್ರಾರ್ಥನೆಯ ಮೂಲಕ ದೇವರ ಬಳಿಗೆ ಹೋದರು, (2) ದೂತರ ಮೂಲಕ ದೇವರು ಪೇತ್ರನನ್ನು ಬಿಡಿಸಿದನು, (3) ನಂತರ ಪೇತ್ರನು ಮರಿಯಳ ಮನೆಗೆ ಹೋದನು (4) ಅವರ ಮನೆಯಲ್ಲಿ ಅವನು ಪ್ರವೇಶಿಸಲು ಕಷ್ಟವಾಯಿತು!



ಇವುಗಳನ್ನು ಚಿತ್ರದ ಮೂಲಕ ನಿರೂಪಿಸಬಹುದು.

## ಪ್ರಸಂಗದ ಟಿಪ್ಪಣಿ

ಪೇತ್ರನು 1 ಪೇತ್ರ 3:12ನ್ನು ಬರೆಯುವಾಗ, ಈ ಅದ್ಭುತವಾದ ಬಿಡುಗಡೆಯ ಕುರಿತು ಯೋಚಿಸಿ ಬರೆದಿರಬಹುದು ಎಂದು ವಾರನ್ ವೆಸ್ಬಿಯವರು ತಿಳಿಸಿರುವರು. ಅಪೊಸ್ತಲರ ಕೃತ್ಯ 12ರಲ್ಲಿ ಸಾರಾಂಶವನ್ನು ಬರೆಯಲು ಅವರು ಆ ವಚನವನ್ನು ಬಳಸಿರುವರು. (1) ದೇವರು ನಮ್ಮ ಸಂಕಟಗಳನ್ನು ಗಮನಿಸುವನು ಕರ್ತನು ನೀತಿವಂತರನ್ನು ರಕ್ಷಿಸುತ್ತಾನೆ (ವಚನಗಳು 1-4): (2) ದೇವರು ನಮ್ಮ ಪ್ರಾರ್ಥನೆಯನ್ನು ಆಲಿಸುವನು (ವಚನಗಳು 5-17). "ಆತನು ಅವರ ವಿಜ್ಞಾಪನೆಗಳಿಗೆ ಕಿವಿಗೊಡುತ್ತಾನೆ." (3) ವೈರಿಗಳನ್ನು ಶಿಕ್ಷಿಸುತ್ತಾನೆ (ವಚನಗಳು 18-25): "ಕೆಡುಕರಿಗೋ ಕರ್ತನು ಕೋಪದ ಮುಖವುಳ್ಳವನಾಗಿರುತ್ತಾನೆ."

---

ಟಿಪ್ಪಣಿಗಳು

[1]ಅಗ್ರಿಪ್ಪರಾಜನು ಕ್ರಿ.ಶ. 44ರಲ್ಲಿ ಮರಣ ಹೊಂದಿದ್ದರಿಂದ, ಯೆರೂಸಲೇಮಿನ ಕ್ರೈಸ್ತರಿಗೆ ಹಿಂಸೆಯಾಗಿರಬಹುದು. ಅಂತಿಯೋಕ್ಯದವರು "ಆ ಸಮಯದಲ್ಲಿ" ಅಂದರೆ ಕ್ಷಾಮ ಬರುವ ಮೊದಲೇ "ದ್ರವ್ಯವನ್ನು" ಕಳುಹಿಸಿದ್ದರು. [2]ಗ್ರೀಕ್ ಮೂಲದಲ್ಲಿ "ಸಭೆಯ ಕೆಲವರು ಎಂಬುದಾಗಿದೆ." [3]ಯಾಕೋಬ ಮತ್ತು ಪೇತ್ರರು ಮಾತ್ರ ಸೆರಮನೆಗೆ ಹಾಕಲ್ಪಟ್ಟಿದ್ದರು ಎಂದು ಅನೇಕರು ಹೇಳು ತ್ತಾರೆ, ಅದನ್ನು ಅಕ್ಷರಶಃ ತೆಗೆದುಕೊಂಡರೆ, ಸಭೆಯ ಇತರರು ಹಿಡಿಯಲ್ಪಟ್ಟಿದ್ದರು. ಇದು ನಿಜವಾಗಿದ್ದರೆ, ಅವರುಗಳು ಯಾರು? ಅವರಿಗೆ ಏನಾಗಿರಬಹುದು ಎಂದು ನಾವು ಅರಿಯೆವು. [4]"ಹೆರೋದನ ಮನೆಯ" ಕುರಿತು ಮುಂದಿನ ಪಾಠವನ್ನು ನೋಡಿ. [5]ಸ್ತೆಫನನನ್ನು ಕಲ್ಲೆಸೆದು ಕೊಂದರು, ಯಾಕೋಬನನ್ನು ಗಲ್ಲಿಗೇರಿಸಿದರು, ಎನ್ನುವಂತಹ ಮರಣದ ವಿವಿಧ ಕ್ರಮಗಳಿರುವಂತೆ, ಯೇಸು ಕ್ರೂಜಿತನಾದನು, ಅದನ್ನು ಹಳೇ ಒಡಂಬಡಿಕೆಯಲ್ಲಿ ಮುಂತಿಳಿಸಲಾಗಿತ್ತು. [6]ಲೂಕನು ಪ್ರೇರಿತನಾಗಿ ಬರೆದನೆಂಬುದು ಊರ್ಜಿತವಾಗಿದೆ. ಮನುಷ್ಯನು ತನ್ನ ತೃಪ್ತಿಗಾಗಿ ಬರೆಯುವನು, ದೇವರು ಅಗತ್ಯವಿರುವದನ್ನು ಮಾತ್ರ ಬರೆಯುವನು ಅದರಿಂದ ಆತ್ಮಗಳಿಗೆ ರಕ್ಷಣೆಯಾಗುದು. [7]ಇವರು ಬೇರೆ ಪೇತ್ರ ಮತ್ತು ಯೋಹಾನರಾಗಿದ್ದರು. [8]1:6ರ ವಿವರಣೆ ನೋಡಿರಿ. "ಕಡೇ ಗಳಿಗೆಯ ಸಿದ್ಧತೆ" *ಅಪೊಸ್ತಲರ ಕೃತ್ಯಗಳು, 1.* [9]ಪತ್ಮೋಸ್ ದ್ವೀಪದಲ್ಲಿದ್ದ ಯೋಹಾನನು, "ಸಂಕಟದ ಪಾತ್ರೆಯನ್ನು" ಕುಡಿದನು (ಪ್ರಕಟನೆ 1:9) ಯೋಹಾನನು ರಕ್ತಸಾಕ್ಷಿಯಾಗಿ ಮರಣ ಹೊಂದಲಿಲ್ಲ. [10]ಯಾಕೋಬನಿಗೆ ಬದಲಾಗಿ ಮತ್ತೊಬ್ಬನನ್ನು ಆಯ್ಕೆ ಮಾಡಿದರು ಎಂಬ ಸೂಚನೆಯಿಂದ ಹೊಸ ಒಡಂಬಡಿಕೆಯು "ಅಪೊಸ್ತಲರ ಪದ್ಧತಿಯನ್ನು ಮುಂದುವರಿಯುವದಿಲ್ಲ."

[11]ಯೆಹೂದ್ಯರ ಮೂರು ಪ್ರಮುಖ ಹಬ್ಬಗಳ ಕುರಿತು ಒಂದನೇ ಪಾಠದ 2:1ರ ಟಿಪ್ಪಣಿ ನೋಡಿ. "ಯೆರೂಸಲೇಮಿನಲ್ಲಿನ ಆರಂಭ" ಅಪೊಸ್ತಲರ ಕೃತ್ಯಗಳು, *ಅಪೊಸ್ತಲರ ಕೃತ್ಯಗಳು, 1.* [12]12:21 ಮುಂದಿನ ಪುಸ್ತಕದ ಟಿಪ್ಪಣಿ ನೋಡಿರಿ. [13]KJV ಅನುವಾದದಲ್ಲಿ "ಪುನರುತ್ಥಾನ" ನಂತರ, ಗ್ರೀಕ್ ಭಾಷೆಯಲ್ಲಿ "ಪಸ್ಕ" ಎಂಬುದಾಗಿದೆ. ಇದು ಇಂಗ್ಲೀಷ್ ಕ್ಯಾಲೆಂಡರ್‌ಗೆ ಅನುಗುಣವಾಗಿದೆ. ಆದರೆ ಅವರು "ಈಸ್ಟರ್" ಎಂಬ ಪದವನ್ನ "ಪಸ್ಕ" ಎಂದು ಮಾಡಿದರು? ಅನುವಾದಕರ ಭಾವವನ್ನು ಇಲ್ಲಿ ನಾವು ಅರಿಯುವದಿಲ್ಲ: ಬಹುಶಃ ಮಾನವ ನಿರ್ಮಿತ ಉದ್ದೇಶಗಳು ಪ್ರಮುಖವಾಗಿದದ್ದರಿಂದ "ಈಸ್ಟರ್" ಎಂದು ಸೇರಿಸಿರಬಹುದು. [14]"ಪಸ್ಕದ ನಂತರ" ಪೇತ್ರನನ್ನು ಯೆಹೂದ್ಯರ ಕೈಗೆ ಒಪ್ಪಿಸುವದು, ಹೆರೋದನ, ಉದ್ದೇಶವಾ ಗಿತು. [15]ಅಂಟೋನಿಯದ ಈ ಸೆರಮನೆಯಿತ್ತು (21:34; 22:24). [16]KJVಯಲ್ಲಿ $^1/_4$ ಅಂಶ ಎಂದಿದ್ದರೆ, NIVಯಲ್ಲಿ "ನಾಲ್ಕು ಸಿಪಾಯಿಗಳು" ಎಂದಿದೆ. [17]ಇಲ್ಲಿರುವ ಅನುಭವವನ್ನು ಅನೇಕ ದೇಶದವರೂ ಹೊಂದಿರುವರು, ಸ್ಥಳೀಯ ಉದಾಹರಣೆಯನ್ನು ಬಳಸಬಹುದು. [18]ಅವನು "ವೃದ್ಧನಾದವನು" ಎಂಬ ಯೇಸುವಿನ ಹೇಳಿಕೆಯನ್ನು ನೆನಪಿಸಿಕೊಂಡನು (ಯೋಹಾನ 21:18). [19]ಪೇತ್ರನ ಆ ಕಾರ್ಯದ ಕುರಿತ ಯೋಚನೆಯನ್ನು ದಾಖಲಿಸಲಾಗಿದೆ. ವಚನ 17. [20]"ಕೆರಗಳು" ಅಂದರೆ ಸಾಧಾರಣವಾದ ಕೆರ. ಕೆರಗಳನ್ನು ಧರಿಸಿ ಸೆರಮನೆಯಲ್ಲಿ ಒಡಾಡುವುದು ಶಬ್ಧಕರವಾಗಿತ್ತು. ಸೆರಮನೆಯನ್ನು ತೆರೆಯುವುದು ಸಾಧಾರಣವಾದ ಕೆಲಸವಾ ಗಿರಲಿಲ್ಲ.

[21]ವೈಯಕ್ತಿಕವಾದ ಕನಸುಗಳನ್ನು ಉದಾಲಿಸಬಹುದು. [22]ಸರಮನೆಯ ಅಧಿಕಾರಿಗಳ

ಹೇಳಿಕೆಯಂತೆ, ಆ ಹೊಸ ಬಾಗಿಲನ್ನು ತೆರೆಯಲು ಸುಮಾರು 25 ಜನರ ಸಹಾಯದ ಅಗತ್ಯತೆಯಿತ್ತು. [23]"ಏಳು ಹೆಜ್ಜೆ" ಎಂದು ವೆಸ್ಟರ್ನ್‌ಟೆಕ್ಸ್ಟ್ ಹೇಳುತ್ತದೆ. [24]ಕ್ಲಾರೆನ್ಸ್ ಜೊರ್ಡಾನ್. [25]ಅಪೊಸ್ತಲರ ಕೃತ್ಯ 5ರಲ್ಲಿ ಅಪೊಸ್ತಲರು ಬಿಡುಗಡೆಗೊಂಡಾಗ, ದೇವಾಲಯಕ್ಕೆ ಹೋಗಿ ಪ್ರಸಂಗಿಸಿರಿ ಎಂಬ ಕರೆಯನ್ನು ನೀಡಲಾಯಿತು, ಈ ಸಮಯದಲ್ಲಿ ಅವರಿಗೆ ಈ ವಿಧವಾದ ಮಾರ್ಗದರ್ಶನ ದೊರಕಲಿಲ್ಲ, ಪೇತ್ರನನ್ನು ಸಂರಕ್ಷಿಸುವ ಸಲುವಾಗಿ ಉಂಟಾದ ಅದ್ಭುತ ಆದ್ದರಿಂದ ಪೇತ್ರನು ಅಡಗಿಕೊಂಡನು. [26]"ಮರಿಯಳ ಮನೆ" ಎಂದು ಕರೆದಿರುವದರಿಂದ, ಆಕೆಯು ವಿಧವೆಯಾಗಿರಬಹುದು. ವಿಶ್ಲೇಷಕರ ಹೇಳಿಕೆಯಂತೆ, ಅದು ಯೇಸು ತನ್ನ ಶಿಷ್ಯರಂದಿಗೆ ಊಟಮಾಡಿದ ಹಾಗೂ ಅಪೊಸ್ತಲರು ಪ್ರಾರ್ಥನೆಗಾಗಿ ಸೇರಿಬಂದ ಮೇಲುಪ್ಪರಿಗೆಯಾಗಿರಬಹುದು (1:13). ಅದು ಸಂದೇಹವಷ್ಟೆ, ಸಭೆಯ ಸದಸ್ಯರು ಖಾಸಗಿಯಾದ ಸ್ಥಳಗಳನ್ನು ಇನ್ನೂ ಹೊಂದಿದ್ದರು. ಅವರು "ಒಟ್ಟಾಗಿ ದ್ರವ್ಯ ಸಂಗ್ರಹಣೆ" ಮಾಡಿದರು, ಸ್ವಯಂಚಿತ್ತದಿಂದ ಎಲ್ಲಾ ಕ್ರೈಸ್ತರೂ ತಮ್ಮ ಆಸ್ತಿಯನ್ನು ಮಾರಾಟಮಾಡಿರಲಿಲ್ಲ. [27]ಇತರೆ ಸತ್ಯವೇದದ ಜನರಂತೆ ಮಾರ್ಕನೆನೆಸಿಕೊಳ್ಳುವ ಯೋಹಾನನ ಇತರೆ ಹೆಸರನ್ನು ಹೊಂದಿದ್ದನು "ಯೋಹಾನ" ಎಂಬುದು ಅವನ ಇಬ್ರಿಯ ನಾಮ "ಮಾರ್ಕ" ಎಂಬುದು ಅವನ ರೋಮಾಯದ (ಲ್ಯಾಟೀನ್) ನಾಮ. [28]ಎರಡು ಸೂಚನೆಗಳು (1) ಮಾರ್ಕನೆನಿಸಿಕೊಳ್ಳುವ ಯೋಹಾನನೊಂದಿಗಿನ ಅವನ ಸಂಬಂಧ (ಪಾಠದಲ್ಲಿ ತಿಳಿಸಿರುವಂತೆ) ಮತ್ತು (2) ದಾಸಿಯು ಅವನ ಸ್ವರವನ್ನು ಗ್ರಹಿಸಿದಳು (ವಚನ 14). [29]ಪ್ರಾಣಿಗಳು ತುಂಬಿದ ವಾಹನವು ಮುಖ್ಯದ್ವಾರದಲ್ಲಿ ಚಲಿಸಬಹುದಿತ್ತು, ಅದರಲ್ಲಿ ಒಂದು ಚಿಕ್ಕ ಬಾಗಿಲಿತ್ತು, ಅದರಲ್ಲಿ ಜನರು ಒಳಹೋಗಬಹುದಿತು. [30]ಮರಿಯಳ ಮನೆಯಲ್ಲಿ ವಿಶಾಲವಾದ ಅಂಗಳವಿದ್ದರಿಂದ, ಅಲ್ಲಿ ಅನೇಕರು ಸೇರಿ ಬರಬಹುದಿತ್ತು. ಆರ್ಥಿಕವಾಗಿ ಸದೃಢವಾಗಿದ್ದಳು.

[31]"ರೋದೆ" ಎಂದರೆ "ಗುಲಾಬಿ" (ಅಥವಾ ಚಿಕ್ಕ ಗುಲಾಬಿ). [32]ರೋದೆಯು ವಿಶ್ವಾಸಿಯಾಗಿ, ಪೇತ್ರನಿಗಾಗಿ ಪ್ರಾರ್ಥಿಸುತ್ತಿದದ್ದರಿಂದ ಸಂತೋಷಗೊಂಡಳು. [33]ಅವನು ಈಗಾಗಲೇ ಮರಣ ಹೊಂದಿರಬಹುದಾದ್ದರಿಂದ "ಅವನ ಆತ್ಮ" ಎಂದು ತಿಳಿದರು. [34]J. W. McGarvey, *New Commentary on Acts of Apostles,* vol. 1 (Delight, Ark.: Gospel Light Publishing Co, n.d.), 237. [35]"ಪೇತ್ರನು ಕೈ ಕುಲುಕಿದನು" ಎಂದು ಗ್ರೀಕ್ ಬರವಣಿಗೆ ತಿಳಿಸುತ್ತದೆ, ತನ್ನ ಕೈಯನ್ನು ಎತ್ತಿದನು, ಮೌನವಾಗಿರಿಸಿದನು. [36](ಪ್ರೇರಿತವಲ್ಲದ ಸಂಪ್ರದಾಯದಂತೆ) ಯಾಕೋಬನು ಸಭಾ ಸೇವಕನಾಗಿದ್ದನು. ಯೆರೂಸಲೇಮಿನಲ್ಲಿ ಹಿರಿಯರ ಬಹು ಪದವಿದೆ (15:2, 22). [37]ಅಲ್ಲಿ ಯಾಕೋಬನು, ಮತ್ತು ಯೋಸೇಫನು ಇದ್ದು. ಯೇಸುವಿನ ತಂದೆ, ದೇವರೇ, ಅವರಿಬ್ಬರಿಗೂ ಒಂದೇ ತಾಯಿ, ಬೇರೆ ತಂದೆಯರು. [38]15:13; 21:18; ಗಲಾತ್ಯ 2:9 ನೋಡಿರಿ. ಹೊಸ ಒಡಂಬಡಿಕೆಯ ಪುಸ್ತಕಗಳನ್ನು ಬರೆದ ಇಬ್ಬರನ್ನು ತಿಳಿಸಿ (ಆ ಪುಸ್ತಕಗಳೇ ಅವರ ಹೆಸರನ್ನು ತಿಳಿಸುತ್ತವೆ). ಮಾರ್ಕ ಮತ್ತು ಯಾಕೋಬ. [39]ಪೇತ್ರನು ರೋಮಾಯಕ್ಕೆ ಹೋಗಿರಬಹುದು ಎಂಬುದು ಕೆಲವರ ಅಭಿಪ್ರಾಯ, ಮುಂದಿನ 25 ವರ್ಷಗಳ ಕಾಲ ಅವನು ಅಲ್ಲಿ "ಬಿಷಪ್" ಆಗಿರಬಹುದು, ಆದರೆ ಅಧ್ಯಾಯ 15ರಲ್ಲಿ ಪೇತ್ರನು ಯೆರೂಸಲೇಮಿನಲ್ಲಿ ಕಾಣಿಸಿಕೊಂಡನು. ಅದು ಸತ್ಯವಾಗಿರದೇ ಇರಬಹುದು. ಗಲಾತ್ಯ 2:11 ಪೇತ್ರನು ಅಂತಿಯೋಕ್ಯಕ್ಕೆ ಹೋದನು ಎಂಬುದಾಗಿದೆ, ಈ ಸಂದರ್ಭದಲ್ಲಿಯೇ ಅವನು ಅಲ್ಲಿಗೆ ಹೋದನು ಎಂಬ ಸಂಶಯವಿದೆ. 1 ಕೊರಿಂಥ 1:12ರಲ್ಲಿ ಅವನು ಕೊರಿಂಥಕ್ಕೆ ಹೋದನು ಎಂಬ ಸೂಚನೆಯಿದೆ. ಅವನು ಯೆರೂಸಲೇಮಿನಲ್ಲಿ ಅಡಗಿರುವ ತಾಣವನ್ನು ಕಂಡುಕೊಂಡಿರ ಬಹುದು, ಆ ಸ್ಥಳವನ್ನು ಅವನ ವೈರಿಗಳು ಅರಿತಿರಲಿಲ್ಲ. [40]ಅಧ್ಯಾಯ 15ರಲ್ಲಿ ಪೇತ್ರನ ಕುರಿತು ಅಲ್ಪವಾಗಿ ನೋಡುತ್ತೇವೆ.

[41]ಅಲ್ಪ ಸಮಯದಲ್ಲೆ ಸಭೆಯು ವೃದ್ಧಿಯಾದ್ದರಿಂದ, ಹನ್ನೆರಡು ಜನರಲ್ಲಿ ಒಬ್ಬನ ಮರಣವು ವೈರಿಗಳಿಗೆ ಒಳಿತು ಉಂಟುಮಾಡಿರಬಹುದು, ಸಭೆಯವರು ಇತರೆ ನಾಯಕರನ್ನು ಸಿದ್ಧಗೊಳಿಸುವಲ್ಲಿ ಯಶಸ್ವಿಯಾಗಿದ್ದರು ಎಂಬ ಸೂಚನೆಯಾಗಿದೆ. [42]ಈ ಪಾಠವನ್ನು ಪ್ರಸಂಗಿಸುವುದಾದರೆ, ಪ್ರಾರ್ಥಿಸುವವನು ದೇವರೊಂದಿಗೆ ಒಳ್ಳೆಯ ಸಂಬಂಧವನ್ನು ಹೊಂದಿದ್ದರೆ ಮಾತ್ರ, ಅವನ ಪ್ರಾರ್ಥನೆ ಬಲವನ್ನು ಹೊಂದಿರುತ್ತದೆ ಎಂದು ಸತ್ಯವೇದದ ಈ ಕಥೆಯು ತಿಳಿಸುತ್ತದೆ, ದೇವರೊಂದಿಗಿನ ವ್ಯಯಕ್ತಿವಾದ ಸಂಬಂಧವನ್ನು ಪರಿಶೀಲಿಸಲು ಉತ್ತೇಜಿಸಿರಿ.